## ಅಧ್ಯಾಯ 7

# ಒಂದು ಮಧ್ಯಂತರ

7ನೇ ಅಧ್ಯಾಯದ ದೃಶ್ಯವು ಪ್ರಕಟನೆ ಪುಸ್ತಕದ ವಾಚನವನ್ನು ಮೂಲತಃ ಕೇಳಿಸಿಕೊಂಡವರಿಗೆ ಒಂದು ಆಶ್ಚರ್ಯವನ್ನುಂಟು ಮಾಡಿರಬಹುದಾಗಿದೆ. ಮೊದಲ ಆರು ಮುದ್ರೆಗಳು ಒಂದಾದ ಮೇಲೊಂದರಂತೆ ತ್ವರಿತವಾಗಿ ಒಡೆಯಲ್ಪಟ್ಟಿದ್ದವು. ಈಗ ಮುಂದೆ ಏಳನೆಯ ಮುದ್ರೆಯು ಒಡೆಯಲ್ಪಡುವದೆಂದು ಶ್ರೋತೃಗಳು ಎದುರು ನೋಡಿರಬಹುದಾಗಿದೆ; ಆದರೆ ಅದು ಸಂಭವಿಸುವದಕ್ಕೆ ಮುಂಚೆ (ನೋಡಿರಿ 8:1), ವ್ಯಾಖ್ಯಾನಕಾರರು ಕರೆಯುವ ಪ್ರಕಾರ, ಅಲ್ಲೊಂದು "ಮಧ್ಯಂತರ" ಅಥವಾ "ಪ್ರಕ್ಷೇಪ" ಇತ್ತು: 144,000 ಮಂದಿಗೆ ಸಾಂಕೇತಿಕವಾಗಿ ಮುದ್ರೆ ಹಾಕುವದು ಮತ್ತು ಸಿಂಹಾಸನದ ಸುತ್ತಲು ಎಣಿಸಲಾಗದಷ್ಟು ಅಸಂಖ್ಯಾತ ಜನಸಮೂಹಗಳ ಚಿತ್ರಣ. ಇದೇ ರೀತಿಯ ಮಧ್ಯಂತರವೊಂದು 10 ಹಾಗೂ 11 ಅಧ್ಯಾಯಗಳಲ್ಲಿ ಆರನೆಯ ಮತ್ತು ಏಳನೆಯ ತುತೂರಿಗಳ ನಡುವೆ ಸಂಭವಿಸುತ್ತದೆ.

ಅಧ್ಯಾಯ 7ರಲ್ಲಿ ನಡೆಯುವ ಘಟನೆಗಳು ಕಾಲವೃತ್ತಾಂತಿಕವಾಗಿ 6ನೇ ಅಧ್ಯಾಯದಲ್ಲಿನ ಘಟನೆಗಳನ್ನು ಅನುಸರಿಸುವದಿಲ್ಲ ಎಂಬುದನ್ನು - ಯೋಹಾನನ ಉದ್ದೇಶವು ಘಟನೆಗಳ ಒಂದು ಕ್ಯಾಲೆಂಡರ್ ಸಿದ್ಧಗೊಳಿಸುವದು ಆಗಿರಲಿಲ್ಲ ಎಂಬುದನ್ನು - ಬಹಳಷ್ಟು ವ್ಯಾಖ್ಯಾನಕಾರರು ಒಪ್ಪಿಕೊಳ್ಳುತ್ತಾರೆ. 7ನೇ ಅಧ್ಯಾಯದಲ್ಲಿನ ಘಟನೆಗಳು ಆರನೆಯ ಮುದ್ರೆಯ ಘಟನೆಗಳು ಸಂಭವಿಸುವದಕ್ಕೆ ಮುಂಚೆಯೇ, ಬಹುಶಃ ಮೊದಲನೆಯ ಮುದ್ರೆಯ ಮುಂಚೆ ಸಹ ನಡೆದಿರುತ್ತವೆಂಬುದಕ್ಕೆ ಹಲವರು ಕುರುಹುಗಳಿರುತ್ತವೆ:

ಉದಾಹರಣೆಗೆ, ಐದನೆಯ ಮುದ್ರೆಯ ಅಡಿಯಲ್ಲಿ, ರಕ್ತಸಾಕ್ಷಿಗಳು ಪ್ರತೀಕಾರಕ್ಕಾಗಿ ಮೊರೆಯಿಟ್ಟಿದ್ದರು, ಆದರೆ ಅವರ ನ್ಯಾಯವು ಸ್ಥಾಪಿಸಲ್ಪಡಬೇಕಾದರೆ "ಇನ್ನೂ ಸ್ವಲ್ಪ ಕಾಲ" ಆಗುವದು ಎಂದು ಅವರಿಗೆ ಹೇಳಲಾಗಿತ್ತು (6:11). ಅವರಿಗಾದ ಅನ್ಯಾಯಕ್ಕೆ ಪ್ರತಿದಂಡನೆಯು ಅನಂತರದಲ್ಲಿ, ಆರನೆಯ ಮುದ್ರೆಯು ಒಡೆಯಲ್ಪಡುವಾಗ ಸಂಭವಿಸುತ್ತದಾದ್ದರಿಂದ, ಐದು ಹಾಗೂ ಆರನೆಯ ಮುದ್ರೆಗಳಲ್ಲಿ ಬಣ್ಣಿಸಲಾಗಿರುವ ದೃಶ್ಯಗಳ ನಡುವೆ ಒಂದು ಕಾಲಾವಧಿಯು ("ಸ್ವಲ್ಪ ಕಾಲ") ಕಳೆದು ಹೋಗಿತ್ತು. 7ನೇ ಅಧ್ಯಾಯದಲ್ಲಿನ ಘಟನೆಗಳು ಆ ಕಾಲಾವಧಿಯೊಳಗೆ ಸರಿ ಹೊಂದಬಹುದಾಗಿದೆ.

ಪುನಃ, 7ನೇ ಅಧ್ಯಾಯದ ಆರಂಭದಲ್ಲಿ, ನಾಲ್ಕು ದೇವದೂತರಿಗೆ ದೇವರ ದಾಸರಿಗೆ ಮುದ್ರೆಯನ್ನು ಹಾಕುವ ತನಕ "*ಭೂಮಿಯನ್ನಾಗಲಿ . . .* ಕೆಡಿಸಬಾರದು" ಎಂದು ಹೇಳಲ್ಪಡುತ್ತದೆ (7:3; ಒತ್ತಿ ಹೇಳಿದ್ದು ನನ್ನದು). ಹೇಗೂ, 6ನೇ ಅಧ್ಯಾಯದಲ್ಲಿ, ಕೆಂಪು ಕುದುರೆಯ ಮೇಲಿನ ಸವಾರನು "*ಭೂಮಿಯಿಂದ* ಸಮಾಧಾನವನ್ನು" ತೆಗೆದು ಬಿಟ್ಟನು (6:4; ಒತ್ತಿ ಹೇಳಿದ್ದು ನನ್ನದು), ಮತ್ತು ಬೂದಿಬಣ್ಣದ ("ಮಂಕು ಬಣ್ಣದ"; KJV) ಕುದುರೆಯ ಸವಾರನಿಗೆ "*ಭೂಮಿಯ* ಕಾಲುಭಾಗದಲ್ಲಿ ಕತ್ತಿಯಿಂದಲೂ ಬರದಿಂದಲೂ ಅಂಟುರೋಗದಿಂದಲೂ ಕಾಡುಮೃಗಗಳಿಂದಲೂ ಕೊಲ್ಲುವದಕ್ಕೆ ಅಧಿಕಾರವು ಕೊಡಲ್ಪಟ್ಟಿತು"

(6:8; ಒತ್ತಿ ಹೇಳಿದ್ದು ನನ್ನದು). "ಭೂಮಿ"ಯನ್ನು "ಕೆಡಿಸುವಿಕೆ" ಯು ನಾಲ್ಕು ಸವಾರರಿಂದ ಆರಂಭಗೊಂಡಿತು ಎಂಬ ವಾಸ್ತವಾಂಶವು ಸೂಚಿಸುವದೇನೆಂದರೆ 7ನೇ ಅಧ್ಯಾಯವು ಕುದುರೆ ಸವಾರರು ಸಂಚರಿಸುವದಕ್ಕೆ ಆರಂಭಿಸುವ ಮುನ್ನವೇ ಸಂಭವಿಸಿತು ಎಂಬುದೆ.

ಅಷ್ಟುಮಾತ್ರವಲ್ಲದೆ, 7ನೇ ಅಧ್ಯಾಯದ ಚತುರ್ದಿಕ್ಕುಗಳ ಗಾಳಿಯು 6ನೇ ಅಧ್ಯಾಯದಲ್ಲಿನ ನಾಲ್ಕು ಕುದುರೆ ಸವಾರರು ಉಂಟು ಮಾಡಿದ ಅದೇ ಸಮಸ್ಯೆಗಳನ್ನೇ ಪ್ರತಿನಿಧಿಸುತ್ತದೆ. J. W. Robertsನು ಅದು ಹೀಗೆಯೇ ಇರುತ್ತದೆಂಬ ಮನವರಿಕೆಯನ್ನು ಹೊಂದಿದ್ದನು:

> ಈ [ಚತುರ್ದಿಕ್ಕುಗಳ] ಗಾಳಿಯು ಮೊದಲ ನಾಲ್ಕು ಮುದ್ರೆಗಳ ಕುದುರೆ ಸವಾರರಿಗೆ ಸಂಕೇತವಾಗಿದೆಯಷ್ಟೆ ಎಂಬುದು ಅಂತ್ಯಕಾಲಿಕದ ಅತ್ಯಂಥ ನಿಖರವಾದ ಗುರುತುಗಳಲ್ಲೊಂದೆಂದು ಕಾಣಿಸುತ್ತದೆ. ಜೆಕರ್ಯನ ದರ್ಶನದಲ್ಲಿ, ಇದರಿಂದಲೇ ಅಂತ್ಯಕಾಲಿಕವು ನಿರಂತರವಾಗಿ ಸಂಗತಿಗಳನ್ನು ತೆಗೆದುಕೊಳ್ಳುವದಾಗಿದ್ದು, ಈ ದರ್ಶನದಲ್ಲಿ ನಾಲ್ಕು ಕುದುರೆ ಸವಾರರು ಆಕಾಶದ ನಾಲ್ಕು ಗಾಳಿಗಳು ಎಂದು ಸುವ್ಯಕ್ತವಾಗಿ ತಿಳಿಸಲಾಗಿರುತ್ತದೆ (ಜೆಕರ್ಯ 6:5).[1]

Robertsನು ಹೇಳಿದ್ದು ಸರಿಯೇ ಆಗಿರುವದಾದಲ್ಲಿ, 7ನೇ ಅಧ್ಯಾಯದಲ್ಲಿ ಬಣ್ಣಿಸಲಾಗಿರುವ ಕ್ರೈಸ್ತರಿಗೆ ಮುದ್ರೆ ಹಾಕುವಿಕೆಯು ಖಂಡಿತವಾಗಿಯೂ ಮೊದಲ ಮುದ್ರೆಯು ಒಡೆಯಲ್ಪಡುವದಕ್ಕೆ ಮುನ್ನವೇ ಸಂಭವಿಸಿರುತ್ತದೆ.

ಅದು ಮಾತ್ರವೇ ಅಲ್ಲದೆ, 7ನೇ ಅಧ್ಯಾಯದಲ್ಲಿನ ಗಾಳಿಗಳು ಏಳು ಮುದ್ರೆಗಳಲ್ಲಿ ಅಥವಾ ಏಳು ತುತೂರಿಗಳಲ್ಲಿ ಬಣ್ಣಿಸಲಾಗಿರುವ ಸಮಸ್ಯೆಗಳಿಗೆ *ಹೆಚ್ಚುವರಿಯಾಗಿ* ಬರುವ ಸಮಸ್ಯೆಯ ಬಿರುಗಾಳಿಗಳನ್ನು ಸೂಚಿಸುತ್ತದೆಂದು ಕೆಲವರು ಯೋಚಿಸುತ್ತಾರೆ ಮತ್ತು ಅದು ಸಾಧ್ಯತೆಯಿರುತ್ತದೆ.

ಎಲ್ಲಾ ಸಾಧ್ಯತೆಯಗಳನ್ನು ಗಮನಕ್ಕೆ ತೆಗೆದುಕೊಂಡ ಬಳಿಕ, 7ನೇ ಅಧ್ಯಾಯದಲ್ಲಿನ ಘಟನೆಗಳು 6ನೇ ಅಧ್ಯಾಯದಲ್ಲಿನ ಭಯಾನಕ ಸಂಭವಗಳ ಮುಂಚೆ ಸಂಭವಿಸಿದವು ಎಂಬ ನಿರ್ಧಾರಕ್ಕೆ ಬರಲು ಹಲವಾರು ಕಾರಣಗಳಿರುವಂತೆ ತೋರುತ್ತದೆ. ಈ ಅರ್ಥನಿರೂಪಣೆಯಿಂದ ಉದ್ಭವವಾಗುವ ಪ್ರಶ್ನೆಯೆಂದರೆ, "ಇದುವೇ ನಿಜವಾಗಿರುವದಾದರೆ, 7ನೇ ಅಧ್ಯಾಯದಲ್ಲಿನ ದೃಶ್ಯಗಳು ಏಕೆ ಮುಂಚಿತವಾಗಿ ಸೇರ್ಪಡೆಗೊಳಿಸಲ್ಪಡಲಿಲ್ಲ?" ಬಹುಶಃ ನಾಟಕೀಯವಾದ ಪರಿಣಾಮವನ್ನು ಸಾಧಿಸುವದಕ್ಕಾಗಿ ವಿಷಯಗಳನ್ನು ವ್ಯವಸ್ಥೆಗೊಳಿಸಲಾಗಿರಬಹುದು. 6ನೇ ಅಧ್ಯಾಯವನ್ನು ಕ್ರಮೇಣವಾಗಿ ಏರುತ್ತಾ ಸಾಗುವ ಶಾಸ್ತ್ರೀಯ ಸಂಗೀತದ ಒಂದು ತುಣುಕಿಗೆ ಹೋಲಿಸಬಹುದು. ಬಳಿಕ, ಅದು ತುತ್ತ ತುದಿಯಲ್ಲಿ ಏರಿ ಇಂದ್ರಿಯಗಳು ಇನ್ನು ತಾಳಿಕೊಳ್ಳಲಾರವು ಎಂದು ಅನ್ನಿಸುವ ವೇಳೆಯಲ್ಲಿ, ಕಿವಿಗೆ ಇಂಪಾಗಿ ತೋರುವ ಒಂದು ವಾಕ್ಯಭಾಗವು ಕಾಣಿಸಿಕೊಳ್ಳುತ್ತದೆ - ಪುನಃ ಉದ್ವೇಗವು ಹೆಚ್ಚುತ್ತಾ ಹೋಗುವ ಮುನ್ನ ಆತ್ಮವನ್ನು ಶಾಂತಗೊಳಿಸುವ ಮಧುರ ಸಂಗೀತ. 7ನೇ ಅಧ್ಯಾಯವು ಶಾಂತಗೊಳಿಸುವ ಮಧ್ಯಂತರವಾಗಿರುತ್ತದೆ.

ಒಂದು ಹೆಚ್ಚು ಸಂಭವನೀಯವಾದ ವಿವರಣೆಯೆಂದರೆ 7ನೇ ಅಧ್ಯಾಯವು 6ನೇ ಅಧ್ಯಾಯದಲ್ಲಿ ಉದ್ಭವವಾಗುವ ಪ್ರಶ್ನೆಗೆ ಉತ್ತರವನ್ನು ನೀಡುತ್ತದೆ. 6ನೇ ಅಧ್ಯಾಯದಲ್ಲಿ ದುರಂತವು ಬಣ್ಣಿಸಲ್ಪಟ್ಟ ಬಳಿಕ - ವಿಶೇಷವಾಗಿ ವಿಶ್ವದ ಸಚಿತ್ರವಾದ (ಸಾಂಕೇತಿಕ) ನಾಶನ - ಯೋಹಾನನ ವಾಚಕರಿಂದ ಬರಬಹುದಾದ ಒಂದು ಸ್ವಾಭಾವಿಕವಾದ ಪ್ರತಿಕ್ರಿಯೆಯು ಏನೆಂದರೆ, "ಆದರೆ ಕ್ರೈಸ್ತರ ವಿಷಯವೇನು? ಈ ಸಂಗತಿಗಳು ಸಂಭವಿಸುವಾಗ ನಮಗೆ ಏನಾಗುವದು?" 7ನೇ ಅಧ್ಯಾಯವು ಅದಕ್ಕೆ ಉತ್ತರವನ್ನು ಕೊಡುತ್ತದೆ. 7ನೇ ಅಧ್ಯಾಯದಲ್ಲಿ

ಎರಡು ದೃಶ್ಯಗಳು ಬಣ್ಣಿಸಲ್ಪಟ್ಟಿರುತ್ತವೆ: 144,000 ಜನರಿಗೆ ಮುದ್ರೆ ಹಾಕಲ್ಪಡುವದು (ವಚನಗಳು 1-8) ಮತ್ತು ಸಿಂಹಾಸನದ ಸುತ್ತಲು ಅಸಂಖ್ಯಾತವಾದ ಜನರ ಸಮೂಹಗಳು ಆರಾಧನೆಯನ್ನು ಮಾಡುತ್ತಿರುವದು (ವಚನಗಳು 9-17).

## 144,000 ಜನರಿಗೆ ಮುದ್ರೆ ಹಾಕುವದು (7:1-8)

### ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದೇವದೂತರು ನಿಂತಿರುವದು (7:1-3)

**[1]ಇದಾದ ಮೇಲೆ ನಾಲ್ಕು ಮಂದಿ ದೇವದೂತರು ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಿಂತುಕೊಂಡು ಭೂಮಿಯ ಮೇಲಾಗಲಿ ಸಮುದ್ರದ ಮೇಲಾಗಲಿ ಯಾವ ಮರದ ಮೇಲಾಗಲಿ ಗಾಳಿಬೀಸದಂತೆ ಭೂಮಿಯ ಚತುರ್ದಿಕ್ಕುಗಳ ಗಾಳಿಗಳಲ್ಲಿ ಹಿಡಿದಿರುವದನ್ನು ಕಂಡೆನು. [2]ಇದಲ್ಲದೆ ಮತ್ತೊಬ್ಬ ದೇವದೂತನು ಜೀವ ಸ್ವರೂಪನಾದ ದೇವರ ಮುದ್ರೆಯನ್ನು ಹಿಡುಕೊಂಡು ಮೂಡಣದಿಕ್ಕಿನಿಂದ ಏರಿಬರುವದನ್ನು ಕಂಡೆನು. ಅವನು ಭೂಮಿಯನ್ನೂ ಸಮುದ್ರವನ್ನೂ ಕೆಡಿಸುವದೆ ಅಧಿಕಾರಹೊಂದಿದ ಆ ನಾಲ್ಕು ಮಂದಿ ದೇವದೂತರಿಗೆ – ನಾವು ನಮ್ಮ ದೇವರ ದಾಸರಿಗೆ ಹಣೆಯ ಮೇಲೆ ಮುದ್ರೆ ಒತ್ತುವತನಕ ಭೂಮಿಯನ್ನಾಗಲಿ ಸಮುದ್ರವನ್ನಾಗಲಿ ಮರಗಳನ್ನಾಗಲಿ ಕೆಡಿಸಬೇಡಿರಿ ಎಂದು ಮಹಾ ಶಬ್ದದಿಂದ ಕೂಗಿ ಹೇಳಿದನು.**

**ವಚನ 1.** 7ನೇ ಅಧ್ಯಾಯವು **ಇದಾದ ಮೇಲೆ** (μετά τοῦτο, *meta touto*) ಎಂದು ಆರಂಭಗೊಳ್ಳುತ್ತದೆ, ಇದು "ಒಂದು ಹೊಸ ಚರ್ಚೆಯಾಂಶವನ್ನು ಅಥವಾ ಹೊಸ ವಿಚಾರಧಾರೆಯನ್ನು ಪರಿಚಯಿಸುವದಕ್ಕೆ ಪ್ರಕಟನೆ ಪುಸ್ತಕದಲ್ಲಿ ಬಳಸಲಾಗಿರುವ ಗ್ರೀಕ್ ಭಾಷೆಯ ಒಂದು ಮಾತಾಗಿರುತ್ತದೆ."[2] ಬಳಿಕ ಯೋಹಾನನು ಹೀಗೆ ಬರೆದನು, **ನಾಲ್ಕು ಮಂದಿ ದೇವದೂತರನ್ನು . . . ಕಂಡೆನು.** ಪುಸ್ತಕದುದ್ದಕ್ಕೂ ದೇವದೂತರು ದೇವರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವದು ಕಾಣಿಸುತ್ತದೆ. ಕೆಲವರಿಗೆ ಪರಿಣತವಾದ ಕೆಲಸಗಳು ಒಪ್ಪಿಸಲ್ಪಟ್ಟಿದ್ದೇವೆಂದು ತೋರುತ್ತದೆ: ಒಬ್ಬನಿಗೆ "ಬೆಂಕಿಗೆ ಅಧಿಕಾರಿಯಾಗಿದ್ದನು" (14:18), ಮತ್ತು ಮತ್ತೊಬ್ಬನು "ಜಲಾಧಿಪತಿ" ಆಗಿದ್ದನು (16:5). 7ನೇ ಅಧ್ಯಾಯದಲ್ಲಿ, **ನಾಲ್ಕು ಮಂದಿ ದೇವದೂತರು** ದೇವರಿಂದ **ಭೂಮಿಯ ಚತುರ್ದಿಕ್ಕುಗಳ ಗಾಳಿಗಳನ್ನು** ನಿಯಂತ್ರಿಸುವದಕ್ಕೆ ಬಳಸಲ್ಪಡುತ್ತಾರೆ. ಇವರು ಸೈತಾನನ ಹತೋಟಿಯಲ್ಲಿದ್ದ ದುಷ್ಟ ದೂತರು ಆಗಿರಲಿಲ್ಲ. ಬದಲಾಗಿ, ದೇವರು ಹೇಳಿದ್ದನ್ನು ಮಾಡುವ ಆತನ ದಾಸರು ಆಗಿದ್ದರು.

ನಾಲ್ಕು ಮಂದಿ ದೇವದೂತರು **ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಿಂತುಕೊಂಡು** ಇದ್ದರು: ಒಬ್ಬನು ಪೂರ್ವ ದಿಕ್ಕಿನಡೆಗೆ; ಇನ್ನು ಉಳಿದವರು ಪಶ್ಚಿಮ, ಉತ್ತರ, ಮತ್ತು ದಕ್ಷಿಣ ದಿಕ್ಕುಗಳಿಗೆ ನಿಂತಿದ್ದರು. ನಾಲ್ಕು "ಬ್ರಹ್ಮಾಂಡ ಸಂಖ್ಯೆ," ಸೃಷ್ಟಿಯ ಸಂಖ್ಯೆ ಆಗಿರುತ್ತದೆ, ಮತ್ತು ಪ್ರಕಟನೆ ಪುಸ್ತಕದಲ್ಲಿ ಅನೇಕ ಸಾರಿ ಎಲ್ಲಾ ಮಾನವರನ್ನು ಸೂಚಿಸುತ್ತದೆ. "ಭೂಮಿಯ ನಾಲ್ಕು ದಿಕ್ಕುಗಳು" ಎಂಬ ಪದಗಳ ವಿಷಯವಾಗಿ ನೋಡುವದಾದರೆ, ಯೋಹಾನನು ಭೂಮಿಯನ್ನು ಸಮತಟ್ಟಾದದ್ದು ಮತ್ತು ಚೌಕ ಆಕಾರದಲ್ಲಿರುತ್ತದೆಂದು ಯೋಚಿಸಿದನೆಂಬುದಾಗಿ ಕೆಲವರು ಆರೋಪ ಮಾಡುತ್ತಾರೆ. ಹೇಗೂ, "ಅಬ್ರಹಾಮನಿಗಿಂತ ಬಹಳ ಕಾಲದ ಮುಂಚೆಯೇ ಜಾಗತಿಕತೆಯನ್ನು ಸೂಚಿಸುವದಕ್ಕಾಗಿ 'ಭೂಮಿಯ ನಾಲ್ಕು ದಿಕ್ಕುಗಳು' ಎಂಬ ಪದವು ಬಳಸಲ್ಪಟ್ಟಿತ್ತು."[3] Warren W. Wiersbeನು ಹೀಗೆ ಬರೆದನು, "'ಭೂಮಿಯ ನಾಲ್ಕು ದಿಕ್ಕುಗಳು' ಎಂಬ ಪದಗುಚ್ಛವು ಯೆಶಾಯ 11:12ರಲ್ಲಿ ಅಥವಾ ದೈನಂದಿನ ಸುದ್ದಿ ಪತ್ರಿಕೆಗಳಲ್ಲಿ ಹೇಗೆ 'ಅವೈಜ್ಞಾನಿಕ' ಅಲ್ಲವೋ ಹಾಗೆಯೇ ಇಲ್ಲಿಯೂ ಅವೈಜ್ಞಾನಿಕವಾಗಿರುವದಿಲ್ಲ."[4]

ಯೆಶಾಯನು ಚದುರಿಸಲ್ಪಟ್ಟಿರುವವರನ್ನು "ಭೂಮಿಯ ಚತುರ್ದಿಕ್ಕುಗಳಿಂದ" ಒಟ್ಟುಗೂಡಿಸುವ ಕುರಿತು ಮಾತಾಡಿದಾಗ (ಯೆಶಾಯ 11:12), ಆತನ ತಾತ್ಪರ್ಯವು ಕೇವಲ "ಎಲ್ಲಾ ಸ್ಥಳಗಳಿಂದ" ಎಂದಷ್ಟೆ ಆಗಿತ್ತು (ನೋಡಿರಿ ಯೆಶಾಯ 11:11). ಇನ್ನೊಂದು ದೃಷ್ಟಾಂತವೆಂದರೆ ಯೆಹೆಜ್ಕೇಲ 7:2,ಅಲ್ಲಿ ಯೆಹೆಜ್ಕೇಲನು "ದೇಶದ [ಪಿಲಿಷ್ಟಿಯ] ಚತುರ್ದಿಕ್ಕುಗಳಿಂದ" ಎಂದು ಮಾತಾಡುತ್ತಾನೆ. ನಿಶ್ಚಯವಾಗಿಯೂ ಪಿಲಿಷ್ಟಿಯ ದೇಶವು ಸಮಭುಜ ಅಥವಾ ಆಯತ ಆಕಾರದಲ್ಲಿರುವದಾಗಿ ಪ್ರವಾದಿಯು ನಂಬಿದ್ದನೆಂದು ಯಾರೂ ಆರೋಪಿಸುವದಿಲ್ಲವಷ್ಟೆ.

ನಾಲ್ಕು ಮಂದಿ ದೇವದೂತರು **ಭೂಮಿಯ ಮೇಲಾಗಲಿ ಸಮುದ್ರದ ಮೇಲಾಗಲಿ ಮರದ ಮೇಲಾಗಲಿ ಗಾಳಿಬೀಸದಂತೆ ಭೂಮಿಯ ಚತುರ್ದಿಕ್ಕುಗಳ ಗಾಳಿಗಳನ್ನು ಹಿಡಿದಿದ್ದರು.** ಈ **ಗಾಳಿಗಳು** ವಿನಾಶದ ಪ್ರತಿನಿಧಿಗಳಾಗಿದ್ದರು, "ಭೂಮಿಯನ್ನು ಮತ್ತು ಸಮುದ್ರವನ್ನು ಕೆಡಿಸುವದಕ್ಕೆ" (ವ. 2) ಮತ್ತು "ಮರಗಳನ್ನು" (ವ. 3) ರಚಿಸಲ್ಪಟ್ಟಿದ್ದರು. ಶಾಸ್ತ್ರಗಳಲ್ಲಿ ರಭಸವಾದ ಗಾಳಿಗಳನ್ನು ಅನೇಕ ಸಾರಿ ದೇವರ ಕೋಪಕ್ಕೆ ಸಂಕೇತವೆಂದು ಬಳಸಲ್ಪಟ್ಟಿರುತ್ತವೆ (ನೋಡಿರಿ ಯೆರೆಮೀಯ 4:11, 12; 23:19; 49:36; 51:1; KJV); ಇಲ್ಲಿ ಅವುಗಳು ಭೂಮಿಯ ಮೇಲೆ ಇಷ್ಟರಲ್ಲೆ ಮುಕ್ತವಾಗಿ ತೆರೆದು ಬಿಡಲ್ಪಡಲಿದ್ದ ಭಯಾನಕತೆಗಳಿಗೆ ಸಂಕೇತವಾಗಿರುತ್ತವೆ. ನಾಲ್ಕು ಗಾಳಿಗಳು ನಾಲ್ಕು ದಿಕ್ಕುಗಳಿಂದ ಬರುತ್ತವಾದ್ದರಿಂದ, "ಎಲ್ಲಾ ಬದಿಗಳಿಂದಲೂ ಸಮಸ್ಯೆ" ಎಂಬ ಯೋಚನೆಯನ್ನು ಒತ್ತಿ ಹೇಳಲಾಗಿರುತ್ತದೆ. ನೀವು ಈ ದೃಶ್ಯವನ್ನು ನಿಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿರುವ ವೇಳೆ, ತಮ್ಮ ಗೊಗಲು ಪಟ್ಟಿಗಳನ್ನು ಎಳೆದಾಡಿಕೊಳ್ಳುತ್ತಾ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕಾಡುಮೃಗಗಳ ರೀತಿಯಲ್ಲಿ ಸುಳಿ ಸುಳಿಯಾಗಿ ಸುತ್ತುತ್ತಿರುವ ಗಾಳಿಗಳನ್ನು ಗಮನಿಸಿರಿ.

**ಯಾವ ಮರದ** ಎಂಬದರ ಸೇರ್ಪಡೆಯು ಒಂದು ರೀತಿಯಲ್ಲಿ ಸಹಜವಾಗಿರುತ್ತದೆ. ಬಹುಶಃ ಮರಗಳು ಸಕಲ ಸಸ್ಯ ಜೀವರಾಶಿಯನ್ನು ಪ್ರತಿನಿಧಿಸುತ್ತವೆ, ಅಥವಾ ಬಹುಶಃ ಒಂದು ಬಲವಾದ ಗಾಳಿಯಿಂದ ಕಿತ್ತೇಸೆಯಲ್ಪಟ್ಟುವುಗಳಾಗಿ ಒಂದು ಬಿರುಗಾಳಿಯು ಬಂದು ಹೋದ ಮೇಲೆ ಕಾಣಿಸುವಂಥ ಛಾಪು ಮೂಡಿಸುವ ದೃಶ್ಯವೆಂದರೆ ಮರಗಳದ್ದೇ ಆಗಿರುತ್ತದಾದ್ದರಿಂದ ಬಹುಶಃ ಅವುಗಳನ್ನು ಪ್ರಸ್ತಾಪಿಸಿರಬಹುದು. ಮರಗಳು ಹಾಗೂ ಇತರ ಬೆಳೆಯುವ ಸಂಗತಿಗಳು 8:7 ಮತ್ತು 9:4ರಲ್ಲಿ ಪ್ರಸ್ತಾಪಿಸಲ್ಪಡುವವು.

**ವಚನ 2.** ಬಳಿಕ ಯೋಹಾನನು **ಇದಲ್ಲದೆ ಮತ್ತೊಬ್ಬ ದೇವದೂತನು ಜೀವಸ್ವರೂಪನಾದ ದೇವರ ಮುದ್ರೆಯನ್ನು ಹಿಡುಕೊಂಡು ಮೂಡಣದಿಕ್ಕಿನಿಂದ**, ಅಂದರೆ "ಪೂರ್ವದಿಕ್ಕು" (NIV) **ಏರಿಬರುವದನ್ನು ಕಂಡೆನು** ಎಂದು ಹೇಳುತ್ತಾನೆ. ಯೆಹೂದಿ ಯೋಚನೆಯಲ್ಲಿ, ದೇವರ ಕೃಪಾಭರಿತವಾದ ಕಾರ್ಯಗಳು ಪೂರ್ವ ದಿಕ್ಕಿಗೆ ಸಂಬಂಧ ಹೊಂದಿದ್ದವು: ಪರದೈಸವು ಪೂರ್ವ ದಿಕ್ಕಿಗೆ ಸಿದ್ಧಪಡಿಸಲ್ಪಟ್ಟಿತ್ತು (ಆದಿಕಾಂಡ 2:8), ದೇವರ ಮಹಿಮೆಯು ಪೂರ್ವ ದಿಕ್ಕಿನಿಂದ ಇಳಿದು ಬಂದಿತು (ಯೆಹೆಜ್ಕೇಲ 43:2), ಮತ್ತು ಮೆಸ್ಸೀಯನು ಪೂರ್ವ ದಿಕ್ಕಿನಿಂದ ಬರುವನೆಂದು ಎದುರು ನೋಡಲಾಗುತ್ತಿದೆ.[5] ಅಲ್ಲದೆ, ದೇವದರ್ಶನ ಗುಡಾರ ಹಾಗೂ ದೇವಾಲಯ ಎರಡೂ ಪುರ್ವ ದಿಕ್ಕಿಗೆ ಮುಖ ಮಾಡಿದ್ದವು. ಸೂರ್ಯೋದಯ ದಿಕ್ಕಿನಿಂದ ಬರುವಂಥದ್ದು ದೇವದೂತನು ಕರ್ತನಿಂದ ಒಂದು ಸಂದೇಶವನ್ನು ತರುತ್ತಿದ್ದನೆಂಬುದನ್ನು ಸೂಚಿಸುತ್ತದೆ.

ಈ ದೇವದೂತನು **ಜೀವಸ್ವರೂಪನಾದ ದೇವರ ಮುದ್ರೆಯನ್ನು** ಹಿಡಿದಿದ್ದನು. ಅನ್ಯಜನರು ಆರಾಧಿಸುತ್ತಿದ್ದ ಮೃತ ಪ್ರತಿಮೆಗಳಿಗೆ ತದ್ವಿರುದ್ಧ ಹೋಲಿಕೆಯಾಗಿ ಯೆಹೋವನು "ಜೀವಸ್ವರೂಪನಾದ ದೇವರು" ಎಂದು ಕರೆಯಲ್ಪಟ್ಟಿದ್ದನು. ದೇವದೂತನು ಆತನ ಮುದ್ರೆಯನ್ನು ಹಿಡಿದುಕೊಂಡಿದ್ದನು. "ಪೌರಸ್ತ್ಯ ದೇಶಗಳ ಚಕ್ರವರ್ತಿಗಳು ತಮ್ಮ ವಿಶೇಷವಾದ

ಮುದ್ರೆಗಳನ್ನು ಹೊಂದಿರುತ್ತಿದ್ದರು, ಅವುಗಳಿಂದ ತಮ್ಮ ಸ್ವತ್ತುಗಳನ್ನು ಗುರುತು ಹಾಕುತ್ತಿದ್ದರು ಹಾಗೂ ಸುರಕ್ಷಿತವಾಗಿ ಕಾಪಾಡಿಕೊಳ್ಳುತ್ತಿದ್ದರು ಮತ್ತು ಕಾನೂನುಬದ್ಧ ದಸ್ತಾವೇಜುಗಳನ್ನು ಪ್ರಮಾಣೀಕರಿಸುವದಕ್ಕೆ ಬಳಸುತ್ತಿದ್ದರು"[6] (5:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಾಮಾನ್ಯವಾಗಿ, ಈ ಮುದ್ರೆಗಳು ಮೊಹರು ಇರುತ್ತಿದ್ದ ಉಂಗುರಗಳಾಗಿರುತ್ತಿದ್ದವು (ಆದಿಕಾಂಡ 41:42; ಎಸ್ತೇರಳು 3:10; 8:2), ಆದರೆ ಅವುಗಳು ಹಿಡಿಕೆಗಳಿರುತ್ತಿದ್ದ ಲೋಹದ ಮುದ್ರೆಗಳು ಸಹ ಆಗಿರಬಹುದಿತ್ತು. ಮುದ್ರೆಯನ್ನು ಹಿಡುಕೊಂಡಿದ್ದ ದೇವದೂತನು **ಭೂಮಿಯನ್ನೂ ಸಮುದ್ರವನ್ನೂ ಕೆಡಿಸುವದಕ್ಕೆ ಅಧಿಕಾರಹೊಂದಿದ ಆ ನಾಲ್ಕು ಮಂದಿ ದೇವದೂತರಿಗೆ . . . ಮಹಾಶಬ್ದದಿಂದ ಕೂಗಿ ಹೇಳಿದನು.**

**ವಚನ 3.** ದೇವದೂತನು ಆ ಇತರ ದೇವದೂತರಿಗೆ ಹೇಳಿದ್ದೇನೆಂದರೆ **ನಾವು ನಮ್ಮ ದೇವರ ದಾಸರಿಗೆ ಹಣೆಯ ಮೇಲೆ ಮುದ್ರೆ ಒತ್ತುವತನಕ ಭೂಮಿಯನ್ನಾಗಲಿ ಸಮುದ್ರವನ್ನಾಗಲಿ ಮರಗಳನ್ನಾಗಲಿ ಕೆಡಿಸಬೇಡಿರಿ. ದಾಸರು** ಎಂಬುದು ಪ್ರಕಟನೆ ಪುಸ್ತಕದ ಆರಂಭಿಕ ಮಾತುಗಳಲ್ಲಿ ಸಿಕ್ಕುವ ಅದೇ ಪದವಾಗಿರುತ್ತದೆ (1:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇದು ದೇವರಿಗೆ ಸೇರಿರುವ ಎಲ್ಲರನ್ನು ಸೂಚಿಸಿದಾಗ್ಯೂ, ವಿಶೇಷವಾಗಿ ಅದು ಆ ಕಾಲದಲ್ಲಿ ಹಿಂಸೆಗೊಳಗಾಗುತ್ತಿದ್ದ ಕ್ರೈಸ್ತರನ್ನು ಸೂಚಿಸಿ ಹೇಳಿದ್ದಾಗಿತ್ತು. ದೇವರು ತನ್ನ ಜನರ ವಿಷಯದಲ್ಲಿ ಕಳಕಳಿ ಹೊಂದಿದ್ದನು. ತತ್ಪರಿಣಾಮವಾಗಿ, ಆತನು ಹೇಳುತ್ತಿರುವದೇನೆಂದರೆ, "ನನ್ನ ಮಕ್ಕಳು ಸಿದ್ಧಪಡಿಸಲ್ಪಡುವ ತನಕ ಭಯಾನಕತೆಗಳನ್ನು ನಿಯಂತ್ರಣದಲ್ಲಿಡಿರಿ." ಇದೇ ರೀತಿಯ ಒಂದು ಘಟನೆಯು ಹಳೆಯ ಒಡಂಬಡಿಕೆಯಲ್ಲಿ ಕಂಡು ಬರುತ್ತದೆ, ಆ ವೇಳೆಯಲ್ಲಿ ನಂಬಿಗಸ್ತರು ಸಿದ್ಧಗೊಳ್ಳುವ ತನಕ ದೇವರು ಪ್ರಳಯವನ್ನು ತಡೆ ಹಿಡಿದಿದ್ದನು (1 ಪೇತ್ರ 3:20).

## ಮುದ್ರೆ ಹಾಕಲ್ಪಟ್ಟವರ ಸಂಖ್ಯೆ (7:4-8)

**[4]ಮುದ್ರೆ ಒತ್ತಿಸಿಕೊಂಡವರ ಸಂಖ್ಯೆಯು ಪ್ರಸಿದ್ಧವಾದಾಗ ನಾನು ಕೇಳಿದೆನು. ಇಸ್ರಾಯೇಲ್ಯರ ಪ್ರತಿಯೊಂದು ಕುಲಕ್ಕೆ ಸೇರಿದವರು ಒತ್ತಿಸಿಕೊಂಡರು. ಅವರ ಸಂಖ್ಯೆ ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಮಂದಿ. [5]ಯೂದನ ಕುಲದಲ್ಲಿ ಮುದ್ರೆಹಾಕಿಸಿಕೊಂಡವರು ಹನ್ನೆರಡು ಸಾವಿರ, ರೂಬೇನನ ಕುಲದವರಲ್ಲಿ ಹನ್ನೆರಡು ಸಾವಿರ, ಗಾದನ ಕುಲದವರಲ್ಲಿ ಹನ್ನೆರಡು ಸಾವಿರ, [6]ಅಷೇರನ ಕುಲದವರಲ್ಲಿ ಹನ್ನೆರಡು ಸಾವಿರ, ನೆಫ್ತಲೀಮನ ಕುಲದವರಲ್ಲಿ ಹನ್ನೆರಡು ಸಾವಿರ, ಮನಾಸ್ಸೆಯ ಕುಲದವರಲ್ಲಿ ಹನ್ನೆರಡು ಸಾವಿರ, [7]ಸಿಮೆಯೋನನ ಕುಲದವರಲ್ಲಿ ಹನ್ನೆರಡು ಸಾವಿರ, ಲೇವಿಯ ಕುಲದವರಲ್ಲಿ ಹನ್ನೆರಡು ಸಾವಿರ, ಇಸ್ಸಕಾರನ ಕುಲದವರಲ್ಲಿ ಹನ್ನೆರಡು ಸಾವಿರ, [8]ಜೆಬುಲೋನನ ಕುಲದವರಲ್ಲಿ ಹನ್ನೆರಡು ಸಾವಿರ, ಯೋಸೇಫನ ಕುಲದವರಲ್ಲಿ ಹನ್ನೆರಡು ಸಾವಿರ, ಬೆನ್ಯಾಮೀನನ ಕುಲದವರಲ್ಲಿ ಮುದ್ರೆ ಹಾಕಿಸಿ ಕೊಂಡವರು ಹನ್ನೆರಡು ಸಾವಿರ ಮಂದಿ ಇದ್ದರು.**

**ವಚನ 4.** ಮುಂದಿನ ಐದು ವಚನಗಳನ್ನು ಅನೇಕರು ಈ ಪುಸ್ತಕದಲ್ಲಿಯೇ ಅತ್ಯಂಥ ಗೊಂದಲಕಾರಿ ವಚನಗಳೆಂದು ಪರಿಗಣಿಸಿರುತ್ತಾರೆ. ಈ ವಾಕ್ಯಭಾಗವು **ಮುದ್ರೆ ಒತ್ತಿಸಿಕೊಂಡವರ ಸಂಖ್ಯೆಯು ಪ್ರಸಿದ್ಧವಾದಾಗ ನಾನು ಕೇಳಿದೆನು. ಇಸ್ರಾಯೇಲ್ಯರ ಪ್ರತಿಯೊಂದು ಕುಲಕ್ಕೆ ಸೇರಿದವರು ಒತ್ತಿಸಿಕೊಂಡರು. ಅವರ ಸಂಖ್ಯೆಯು ಒಂದು ಲಕ್ಷ ನಾಲ್ವತ್ತುನಾಲ್ಕು ಸಾವಿರ ಎಂದು ಆರಂಭಗೊಳ್ಳುತ್ತದೆ.** ಅಪೊಸ್ತಲನು ತಾನೇ ವೈಯಕ್ತಿಕವಾಗಿ 144,000 ಎಂದು ಲೆಕ್ಕ ಮಾಡಲಿಲ್ಲ; ಬದಲಾಗಿ, ಆತನಿಗೆ ಸಂಖ್ಯೆಯು *ಹೇಳಲ್ಪಟ್ಟಿತು.*

2ರಿಂದ 8 ವಚನಗಳಲ್ಲಿರುವ ಮುಖ್ಯ ಪದವೆಂದರೆ "ಮುದ್ರೆ": ಮೂಡಣದಿಕ್ಕಿನಿಂದ ಬಂದ

ದೇವದೂತನ ಕೈಯಲ್ಲಿ "ಜೀವಸ್ವರೂಪನಾದ ದೇವರ *ಮುದ್ರೆ*" ಇತ್ತು (ವ. 2; ಒತ್ತಿ ಹೇಳಿದ್ದು ನನ್ನದು). ಆತನು ದೇವರ ದಾಸರಿಗೆ "ಹಣೆಯ ಮೇಲೆ *ಮುದ್ರೆ ಒತ್ತುವತನಕ*" ಅವರು "ಭೂಮಿಯನ್ನಾಗಲಿ ಸಮುದ್ರವನ್ನಾಗಲಿ ಮರಗಳನ್ನಾಗಲಿ ಕೆಡಿಸಬಾರದು" ಎಂದು ಈತನು ಕೂಗಿ ಹೇಳಿದನು (ವ. 3; ಒತ್ತಿ ಹೇಳಿದ್ದು ನನ್ನದು). "ಇಸ್ರಾಯೇಲ್ಯರ ಪ್ರತಿಯೊಂದು ಕುಲಕ್ಕೆ ಸೇರಿದವ" ರಲ್ಲಿ ಸಾವಿರಾರು ಮಂದಿ **ಒತ್ತಿಸಿಕೊಂಡರು**. ಇಸ್ರಾಯೇಲ್ಯರ ಹನ್ನೆರಡು ಕುಲಗಳನ್ನು ಪಟ್ಟಿ ಮಾಡಲಾಗಿದ್ದು ಪ್ರತಿಯೊಂದು ಕುಲದವರಲ್ಲಿ "*ಮುದ್ರೆ ಹಾಕಿಸಿಕೊಂಡವರು* ಹನ್ನೆರಡು ಸಾವಿರ."

ಒಂದು ಮುದ್ರೆಗೆ ಮೂರು ವಿಧವಾದ ಉದ್ದೇಶಗಳಿರುತ್ತಿದ್ದವು (5:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ): (1) ಒಡೆಯತ್ವವನ್ನು ಪ್ರಮಾಣೀಕರಿಸುವದಕ್ಕೆ (ಪರಮಗೀತ 8:6), (2) ಅಪ್ಪಟತನವನ್ನು ಖಚಿತಪಡಿಸುವದಕ್ಕೆ (ಎಸ್ತೇರಳು 3:12), ಮತ್ತು (3) ದಸ್ತಾವೇಜಿನಲ್ಲಿರುವದನ್ನು ಸುರಕ್ಷಿತವಾಗಿ ಕಾಪಾಡುವದಕ್ಕೆ (ಮತ್ತಾಯ 27:66). ಪ್ರಕಟನೆ 7ನೇ ಅಧ್ಯಾಯದಲ್ಲಿರುವ "ಜೀವಸ್ವರೂಪನಾದ ದೇವರ ಮುದ್ರೆ" ಈ ಎಲ್ಲಾ ಮೂರು ಉದ್ದೇಶಗಳನ್ನು ನೆರವೇರಿಸಿತ್ತು: (1) ದಾಸರು ದೇವರಿಗೆ ಸ್ವಂತವಾಗಿರುವವರು ಎಂಬುದನ್ನು ಅದು ತೋರಿಸುತ್ತದೆ. (2) ದೇವರ ದಾಸರನ್ನು ಹೊರತು ಪಡಿಸಿ ಬೇರೆ ಯಾರಿಗೂ ಮುದ್ರೆ ಹಾಕಲ್ಪಡಲಿಲ್ಲ; ಹೀಗೆ ಮುದ್ರೆಯು ಅಪ್ಪಟತನವನ್ನು ಸೂಚಿಸುತ್ತದೆ. (3) ಹೇಗೂ, ಪ್ರಕಟನೆ 7ರಲ್ಲಿ ಕೊಡಲಾಗಿರುವ ಮುಖ್ಯ ಒತ್ತು *ಭದ್ರತೆಯ* ಮೇಲೆ ಆಗಿದೆ; ದಾಸರನ್ನು ಮುಂದೆ ಬರಲಿದ್ದ ವಿನಾಶಗಳಿಂದ ಭದ್ರವಾಗಿ ಕಾಪಾಡುವದಕ್ಕೋಸ್ಕರ ಅವರು ಮುದ್ರೆ ಒತ್ತಲ್ಪಟ್ಟರು. ಅವರು ಈ ವಿಧದಲ್ಲಿ ಭದ್ರವಾಗಿ ಕಾಪಾಡಲ್ಪಟ್ಟರು ಎಂಬುದನ್ನು ಪ್ರಕಟನೆ 9ರಲ್ಲಿ ಕಾಣಬಹುದಾಗಿದೆ, ಅಲ್ಲಿ ಪಾತಾಳದಿಂದ ಬಂದ ಮಿಡತೆಗಳಿಗೆ "ಹಣೆಯ ಮೇಲೆ ದೇವರ ಮುದ್ರೆಯಿಲ್ಲದವರಾದ ಮನುಷ್ಯರನ್ನು ಮಾತ್ರ ಕೆಡಿಸಬೇಕೆಂದು" ಅನುಮತಿಯನ್ನು ಕೊಡಲಾಗಿತ್ತು (9:4).

144,000 ಮಂದಿಗೆ ಮುದ್ರೆ ಒತ್ತುವದಕ್ಕೆ ಸಮಾನತೆಯುಳ್ಳ ಹಳೆಯ ಒಡಂಬಡಿಕೆಯ ನಿದರ್ಶನವನ್ನು ಯೆಹೆಜ್ಕೇಲ 9:2-6ರಲ್ಲಿ ಕಾಣಬಹುದಾಗಿದೆ: ದೇವರು ಭಕ್ತಿಹೀನರಿಗೆ ದಂಡನೆಯನ್ನುಂಟು ಮಾಡುವದಕ್ಕಾಗಿ ಯೆರೂಸಲೇಮಿನೊಳಗೆ ಆರು ಮಂದಿ ಮರಣ ವಿಧಿಸುವವರನ್ನು ಕಳುಹಿಸಿದನು. ಆರು ಮಂದಿಯ ಜೊತೆಯಲ್ಲಿ ಪ್ರಯಾಣಿಸುತ್ತಿದ್ದ ಮತ್ತೊಬ್ಬನೆಂದರೆ "ಲೇಖಕನ ದೌತಿಯನ್ನು" ಹಿಡಿದುಕೊಂಡಿದ್ದ ವ್ಯಕ್ತಿ (ಯೆಹೆಜ್ಕೇಲ 9:2). ಈ ಮನುಷ್ಯನಿಗೆ "ನೀನು . . . ಪಟ್ಟಣದಲ್ಲೆಲ್ಲಾ ತಿರುಗಿ ಅದರೊಳಗೆ ನಡೆಯುವ ಸಮಸ್ತ ಅಸಹ್ಯಕಾರ್ಯಗಳಿಗಾಗಿ ನರಳಿ ಗೋಳಾಡುತ್ತಿರುವ ಜನರ ಹಣೆಯ ಮೇಲೆ ಗುರುತುಮಾಡು" ಎಂದು ಹೇಳಲಾಯಿತು (ಯೆಹೆಜ್ಕೇಲ 9:4). ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ನಿರಪರಾಧಿಗಳನ್ನು ಪ್ರತ್ಯೇಕಗೊಳಿಸುವ ಗುರುತಿನಿಂದ ಗುರುತು ಹಾಕಬೇಕಾಗಿತ್ತು. ಅದಾದ ನಂತರ, ಮರಣ ವಿಧಿಸುವವರು ಯೆರೂಸಲೇಮ್ ಪಟ್ಟಣದಲ್ಲೆಲ್ಲಾ ಸಂಚರಿಸಿ ಸ್ವಲ್ಪವೂ ಕನಿಕರವಿಲ್ಲದೆ "ವೃದ್ಧ, ಯುವಕ, ಯುವತಿ, ಸ್ತ್ರೀ, ಬಾಲಕ, ಎನ್ನದೆ" ಎಲ್ಲರನ್ನೂ ಸಂಹಾರ ಮಾಡಿದರು (ಯೆಹೆಜ್ಕೇಲ 9:6). ಗುರುತು ಯೆಹೆಜ್ಕೇಲನ ದರ್ಶನದಲ್ಲಿ ನಂಬಿಗಸ್ತರನ್ನು ಕಾಪಾಡಿದ ಹಾಗೆಯೇ, ಮುದ್ರೆಯು ಯೋಹಾನನ ದರ್ಶನದಲ್ಲಿ ನಂಬಿಗಸ್ತರನ್ನು ಕಾಪಾಡಿತ್ತು.

ಜನರಿಗೆ ಮುದ್ರೆಯನ್ನು ಒತ್ತುವದು ಆರಂಭದಲ್ಲಿ ವಿಚಿತ್ರವಾಗಿ ಕಾಣಿಸಬಹುದು. ಸಾಮಾನ್ಯವಾಗಿ, *ವಸ್ತುಗಳಿಗೆ* - ದಸ್ತಾವೇಜುಗಳು (1 ಅರಸು 21:8), ಸಿಂಹಗಳ ಗವಿ (ದಾನಿಯೇಲ 6:17) ಮತ್ತು ಯೇಸುವಿನ ಸಮಾಧಿ (ಮತ್ತಾಯ 27:66) - ಮುದ್ರೆ ಹಾಕಲಾಗುತ್ತಿತ್ತು, ಆದರೆ ಇಲ್ಲಿ *ಜನರಿಗೆ* ಮುದ್ರೆ ಒತ್ತಲಾಯಿತು. ಹೇಗೂ, ಆತ್ಮೀಕವಾಗಿ ಮುದ್ರೆ

ಹಾಕಲ್ಪಡುವದು ಆ ಕಾಲದ ಕ್ರೈಸ್ತರಿಗೆ ಪರಿಚಿತವಾಗಿದ್ದ ಭಾವನೆಯಾಗಿತ್ತು, ಮತ್ತು ಅದು ಈ ದಿನದ ಕ್ರೈಸ್ತರಿಗೆ ಸಹ ಪರಿಚಿತವಾಗಿರತಕ್ಕದ್ದು. ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಮಾಡಿಸಲ್ಪಡುವಾಗ, ಆತನು ಪವಿತ್ರಾತ್ಮನನ್ನು ಒಂದು ವರದಾನವಾಗಿ ಪಡೆದುಕೊಳ್ಳುತ್ತಾನೆ (ಅಪೊಸ್ತಲರ ಕೃತ್ಯಗಳು 2:38; ನೋಡಿರಿ ಅಪೊಸ್ತಲರ ಕೃತ್ಯಗಳು 5:32; ಗಲಾತ್ಯ 4:6) - ಮತ್ತು ಈ ಆತ್ಮೀಕ ವಿನಿಮಯವನ್ನು ಒಂದು "ಮುದ್ರೆ" ಎಂದು ಕರೆಯಲಾಗಿರುತ್ತದೆ. ಪೌಲನು ಬರೆದದ್ದೇನೆಂದರೆ, "ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ *ಮುದ್ರೆಯನ್ನು ಹೊಂದಿದಿರಿ*. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವದೆಂಬದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ" (ಎಫೆಸ 1:13, 14; ಒತ್ತಿ ಹೇಳಿದ್ದು ನನ್ನದು; ನೋಡಿರಿ 2 ಕೊರಿಂಥ 1:21, 22; ಎಫೆಸ 4:30). ಪವಿತ್ರಾತ್ಮನು ನಮ್ಮೆಲ್ಲರೊಳಗೆ ವಾಸಿಸುತ್ತಾನೆಂಬ ವಾಸ್ತವಾಂಶವು (1 ಕೊರಿಂಥ 3:16; 2 ತಿಮೊಥೆ 1:14) ಒಡೆಯತ್ವ ಹಾಗೂ ಅಪ್ಪಟತನವನ್ನು ಸೂಚಿಸುತ್ತದೆ (ರೋಮಾ 8:9), ಆದರೆ ಅದು ವಿಶೇಷವಾಗಿ ದೇವರು ಅನುಗ್ರಹಿಸುವ ನಿರಂತರವಾದ ಒದಗಿಸುವ ಆರೈಕೆಯನ್ನು ಕುರಿತು ಮಾತಾಡುತ್ತದೆ (ರೋಮಾ 8:11, 26).[7] ಮೊದಲ ಶತಮಾನದಿಂದ ಈ ಶತಮಾನ ತನಕದ ಕ್ರೈಸ್ತರು ದೇವರಿಂದ ಮುದ್ರೆ ಹಾಕಲ್ಪಟ್ಟಿದ್ದಾರೆ ಮತ್ತು ಆ ಮೂಲಕ ಭದ್ರವಾಗಿ ಕಾಪಾಡಲ್ಪಟ್ಟಿರುತ್ತಾರೆ.

ಪ್ರಥಮ ಶತಮಾನದ ಕ್ರೈಸ್ತರು ಯಾವ ಅರ್ಥದಲ್ಲಿ ಕಾಪಾಡಲ್ಪಟ್ಟಿದ್ದರು? ಮುದ್ರೆಯು ಅವರ ದೇಹಗಳನ್ನು ಬಾಣಗಳು, ಈಟಿಗಳು, ಮತ್ತು ಕತ್ತಿಗಳಿಗೆ ಒಳಪಡುವದಕ್ಕೆ ಸಾಧ್ಯವಿಲ್ಲದವುಗಳನ್ನಾಗಿ ಮಾಡಿತ್ತೋ? ಮುದ್ರೆಯು ಅವರ ಕುತ್ತಿಗೆಗಳನ್ನು ಮರಣ ವಿಧಿಸುವವರ ಕೊಡಲಿಗಳಿಗೆ ಕಡಿಯುವದಕ್ಕಾಗದಷ್ಟು ಗಟ್ಟಿಗೊಳಿಸಿತ್ತೋ? ದಾಹವುಳ್ಳ ಅಗ್ನಿಯ ಜ್ವಾಲೆಗಳು ಅವರ ದೇಹಗಳನ್ನು ನೆಕ್ಕುವದಕ್ಕೆ ಪ್ರಯತ್ನಿಸುವಾಗ ಅವರಿಗೆ ಬಿಸಿಯ ಅನುಭವವಾಗದಂತೆ ಮುದ್ರೆಯು ಅವರ ದೇಹಗಳನ್ನು ಅಗ್ನಿನಿರೋಧಕಗೊಳಿಸಿತ್ತೋ? ಒಬ್ಬ ಕ್ರೈಸ್ತನು ಜೀವಿತವು ತರುವಂಥ ಸಕಲ ಸಮಸ್ಯೆಗಳಿಗೆ ಮಾತ್ರವಲ್ಲದೆ, ದೇವರ ಮಕ್ಕಳು ಅನುಭವಿಸಲೇ ಬೇಕಾಗಿರುವ ವಿಶಿಷ್ಟ ಸಮಸ್ಯೆಗಳಿಗೆ ಸಹ ಅಧೀನನಾಗಿರುತ್ತಾನೆಂಬುದನ್ನು ಶಾಸ್ತ್ರಗಳು ಮತ್ತು ಮನುಷ್ಯ ಅನುಭವ ಇವೆರಡೂ ನಮಗೆ ತಿಳಿಸಿ ಕೊಡುತ್ತವೆ. ಕ್ರೈಸ್ತರಿಗೆ ಸಮಸ್ಯೆ*ಯಿಂದ* ಸುರಕ್ಷತೆಯು ಇರುವದಿಲ್ಲ, ಆದರೆ ಬದಲಾಗಿ ಅವರು ಅದರ *ಮೂಲಕ* ಹಾಯ್ದು ಹೋಗುವ ವೇಳೆ ಭದ್ರವಾಗಿ ಕಾಪಾಡಲ್ಪಡುತ್ತಾರೆ. ಪ್ರಕಟನೆ ಪುಸ್ತಕದ ಒಂದೊಂದು ಅಧ್ಯಾಯವು ಕ್ರೈಸ್ತರಿಗೆ ಬಾಧೆಯಾಗುವದನ್ನು ತೋರಿಸುತ್ತದೆ (1:9; 2:10, 13; 3:10; 6:4, 6, 8-11). ಹಾಗಾದರೆ, "ಮುದ್ರೆಯು ಯಾವ ಅರ್ಥದಲ್ಲಿ ದೇವರ ವಿಶೇಷ ಜನರನ್ನು ಕಾಪಾಡಿತ್ತು?"

ಉತ್ತರವು ಮುದ್ರೆಯು ಒತ್ತಲ್ಪಟ್ಟ *ಸ್ಥಳದಲ್ಲಿ* ಇರುತ್ತದೆ: "ನಾವು ನಮ್ಮ ದೇವರ ದಾಸರಿಗೆ *ಹಣೆಯ ಮೇಲೆ* ಮುದ್ರೆ ಒತ್ತುವತನಕ . . ." (ವ. 3; ಒತ್ತಿ ಹೇಳಿದ್ದು ನನ್ನದು; ನೋಡಿರಿ 9:4; 14:1; 22:4). ದೇವರಿಂದ ಅನುಮೋದನೆಯನ್ನು ಹೊಂದಿದವರ ಹಣೆಗಳ ಮೇಲೆ ಒಂದು ದೈವಿಕ ಚಿಹ್ನೆಯು ಇತ್ತು ಎಂಬು ಈ ಪರಿಭಾಷೆಯ ಅರ್ಥವಾಗಿರುವದಿಲ್ಲ. ಅವರ "ಹಣೆಯ ಮೇಲೆ" ಮುದ್ರೆ ಒತ್ತುವದರ ಮಹತ್ವವೇನಾಗಿರುತ್ತದೆ? ಬಹಳಷ್ಟು ವ್ಯಾಖ್ಯಾನಕಾರರು ಈ ವಿವರವನ್ನು ನಿರ್ಲಕ್ಷ್ಯ ಮಾಡುತ್ತಾರೆ. ಅವರು ಒಂದು ವೇಳೆ ಇದನ್ನು ಪ್ರಸ್ತಾಪಿಸಿದಾಗ್ಯೂ, ಅವರು ಹಣೆಗೆ ಇರುವ ಪ್ರಾಧಾನ್ಯತೆಯನ್ನು, ಅಥವಾ ಹಣೆಯು ಮುಖದಲ್ಲಿರುವ ಒಂದು ವ್ಯಕ್ತಗೊಳ್ಳುವಂತ ಭಾಗವಾಗಿದೆ ಎಂಬುದನ್ನಷ್ಟೆ ಒತ್ತಿ ಹೇಳುತ್ತಾರೆ. ಹೇಗೂ, Robert Mulhollandನು ಆತನು ಹಣೆಯನ್ನು "*ಗ್ರಹಿಕೆಯ ನೆಲೆ*"[8] ಎಂದು ಕರೆಯುವ ಮೂಲಕ

ಸಂಕೇತದ ತಿರುಳನ್ನು ಸೆರೆ ಹಿಡಿಯುತ್ತಾನೆ. ದೇವರ ಜನರಿಗೆ "ಹಣೆಯ ಮೇಲೆ" ಮುದ್ರೆಯನ್ನು ಒತ್ತುವದು ದೇವರು ಒಂದು ನೂತನ ದೃಷ್ಟಿಕೋನವನ್ನು ಒದಗಿಸುವ ಮೂಲಕ ಅವರ *ಮನಸ್ಸುಗಳ* ಮತ್ತು ಹೃದಯಗಳ ಮೇಲೆ "ಸುರಕ್ಷಕವಚ" ವನ್ನು ಹಾಕಿದ್ದನೆಂಬುದನ್ನು ಸೂಚಿಸುತ್ತದೆ.

ದೇವರ ಜನರಿಗೆ ಅವರ ಹಣೆಯ ಮೇಲೆ ಮುದ್ರೆಯನ್ನು ಒತ್ತುವದು ಧರ್ಮೋಪದೇಶಕಾಂಡ 6ನೇ ಅಧ್ಯಾಯವನ್ನು ಜ್ಞಾಪಕ ಪಡಿಸುತ್ತದೆ. ಅಲ್ಲಿ ಇಸ್ರಾಯೇಲ್ಯರಿಗೆ ಹೀಗೆ ಹೇಳಲಾಯಿತು, "ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು . . . ಇವುಗಳನ್ನು ಜ್ಞಾಪಕಾರ್ಥವಾಗಿ ಕೈಗೆ ಕಟ್ಟಿಕೊಳ್ಳಬೇಕು; ಇವು *ಹಣೆಗೆ* ಕಟ್ಟಿಕೊಳ್ಳುವ ಜ್ಞಾಪಕದ ಪಟ್ಟಿಯಂತೆ ಇರಬೇಕು" (ಧರ್ಮೋಪದೇಶಕಾಂಡ 6:6, 8; ಒತ್ತಿ ಹೇಳಿದ್ದು ನನ್ನದು). ಯೆಹೂದ್ಯರು ಈ ಆಜ್ಞೆಯನ್ನು ಅಕ್ಷರಶಃವಾಗಿ ಪಾಲಿಸುತ್ತಾ ತಮ್ಮ ಕೈಗಳಿಗೂ ಹಣೆಗಳಿಗೂ ಜ್ಞಾಪಕಪಟ್ಟಿಗಳನ್ನು - ಶಾಸ್ತ್ರಗಳ ಅತಿ ಚಿಕ್ಕದಾದ ಹಸ್ತಪ್ರತಿಗಳನ್ನೊಳಗೊಂಡು ಇರುತ್ತಿದ್ದ ಚಿಕ್ಕ ಪೆಟ್ಟಿಗೆಗಳು - ಕಟ್ಟಿಕೊಳ್ಳುತ್ತಿದ್ದರು (ಮತ್ತಾಯ 23:5). ಹೇಗೂ, ಇಲ್ಲಿ ಮುಖ್ಯವಾದ ಪದಗುಚ್ಛವು "ನಿಮ್ಮ *ಹೃದಯದಲ್ಲಿರಬೇಕು"* ಎಂಬುದೇ ಎಂದು ಬಹುಪಾಲು ಜನರು ಅರ್ಥಮಾಡಿಕೊಳ್ಳುತ್ತಾರೆ. ಹಣೆಯ ಮೇಲೆ ಮತ್ತು ಕೈಗಳ ಮೇಲೆ ದೇವರ ವಾಕ್ಯವನ್ನು ಕಟ್ಟಿಕೊಳ್ಳುವದೆಂದರೆ ವಾಕ್ಯವು ಅವರ ಹೃದಯದಲ್ಲಿ ಇರುವದಾದಲ್ಲಿ, ಅದು ಅವರ *ಯೋಚನೆ*ಯನ್ನು ಮತ್ತು ಕ್ರಿಯೆಗಳನ್ನು ನಿಯಂತ್ರಿಸುವದು ಎಂದಾಗಿತ್ತು. ಅದೇ ರೀತಿಯಲ್ಲಿಯೇ, ವಿಶ್ವಾಸಿಗಳಿಗೆ ಅವರ ಹಣೆಯ ಮೇಲೆ ಮುದ್ರೆ ಒತ್ತುವದು ಅವರ ಯೋಚನೆಯ ಪ್ರಕ್ರಿಯೆಯ ಮೇಲೆ ಪರಿಣಾಮವುಂಟಾಗಿತ್ತು ಎಂಬುದನ್ನು ಸೂಚಿಸುತ್ತದೆ.

ಒಟ್ಟಾರೆ ಪ್ರಕಟನೆ ಪುಸ್ತಕ ಮತ್ತು ಪ್ರಕಟನೆ 7ರಲ್ಲಿ ಪ್ರಸ್ತಾಪಿಸಲಾಗಿರುವ ಮುದ್ರೆ ಒತ್ತುವಿಕೆ ನಡುವೆ ಒಂದು ಸಮಾನತೆಯಿರುತ್ತದೆ. ಯೋಹಾನನು ಪ್ರಕಟನೆ ಪುಸ್ತಕವನ್ನು ಬರೆಯುವ ವೇಳೆಯಲ್ಲಿ, ಘೋರವಾದ ಹಿಂಸೆಯು ಇನ್ನೂ ಬರುವದರಲ್ಲಿತ್ತು (ನೋಡಿರಿ 3:10). ಹೀಗೆ ಹಿಂಸೆಯನ್ನು ದಾಟಿಕೊಂಡು ಸುರಕ್ಷಿತವಾಗಿ ಬರುವಂತೆ ಕ್ರೈಸ್ತರಿಗೆ ಸಹಾಯ ಮಾಡುವದಕ್ಕಾಗಿ ಪ್ರಕಟನೆ ಪುಸ್ತಕವು ಬರೆಯಲ್ಪಟ್ಟಿತು (ನೋಡಿರಿ 2:10). ಪ್ರಕಟನೆ 7ರಲ್ಲಿ, ರಭಸವಾದ ಗಾಳಿಗಳು ಭೂಮಿಯ ಮೇಲೆ ರಾಜಾರೋಷವಾಗಿ ಬಿಡುಗಡೆಗೊಳ್ಳಲಿದ್ದವು. ಆ ಕಾರಣದಿಂದ ಮುಂಬರುವ ಭಯಂಕರವಾದ ದಿನಗಳಲ್ಲಿ ಬದುಕುಳಿಯುವಂತಾಗಲು ಕ್ರೈಸ್ತರಿಗೆ ಮುದ್ರೆಯನ್ನು ಒತ್ತಲಾಗುತ್ತದೆ. ಒಟ್ಟಾರೆಯಾಗಿ ಪ್ರಕಟನೆ ಪುಸ್ತಕದ ಉದ್ದೇಶವು ಇಷ್ಟರಲ್ಲೇ ಮುಂದೆ ಬರಲಿದ್ದ ಸಮಸ್ಯೆಯಿಂದ ದೇವರ ಜನರನ್ನು ಮುದ್ರೆ ಒತ್ತಿ ಭದ್ರವಾಗಿ ಕಾಪಾಡುವದೇ ಆಗಿತ್ತು.

ಅನಂತರದಲ್ಲಿ, ಮೃಗವನ್ನು ಆರಾಧಿಸುವವರಿಗೆ "ಬಲಗೈಯ ಮೇಲಾಗಲಿ ಹಣೆಯ ಮೇಲಾಗಲಿ ಗುರುತು" ಹಾಕಲ್ಪಡುತ್ತದೆ (ಪ್ರಕಟನೆ 13:16; ನೋಡಿರಿ 14:9; 20:4). ಪ್ರಕಟನೆ ಪುಸ್ತಕದಲ್ಲಿ, "ಜೀವಸ್ವರೂಪನಾದ ದೇವರ *ಮುದ್ರೆ"* ಯು "ಮೃಗದ *ಗುರುತು"* ಯೊಂದಿಗೆ ವಿರುದ್ಧ ಹೋಲಿಕೆ ಮಾಡಲ್ಪಟ್ಟಿರುತ್ತದೆ (16:2; 19:20; ಒತ್ತಿ ಹೇಳಿದ್ದು ನನ್ನದು). ಗುರುತು ಒಬ್ಬ ಮನುಷ್ಯನನ್ನು ರೋಮನ್ ಸಾಮ್ರಾಜ್ಯದ ದೌರ್ಜನ್ಯಗಳಿಂದ ಕಾಪಾಡಬಹುದಾಗಿತ್ತು, ಆದರೆ ಮುದ್ರೆಯು ಮನುಷ್ಯನೊಬ್ಬನನ್ನು ದೇವರ ಕೋಪದಿಂದ ಕಾಪಾಡಬಲ್ಲದ್ದಾಗಿತ್ತು.

ಮುದ್ರೆಯು ಕ್ರೈಸ್ತರಿಗೆ ಭದ್ರತೆಯನ್ನು ನೀಡಿದಾಗ್ಯೂ, ಅವರು ಆಗಲೂ ಹಿಂಜರಿದು ಅಪನಂಬಿಸ್ತರಾಗುವ ಸಾಧ್ಯತೆಯು ಇತ್ತು. ಇಲ್ಲವಾದರೆ, ನಂಬಿಗಸ್ತರಾಗಿರಬೇಕೆಂದು ಬುದ್ಧಿಹೇಳುವದು ಪ್ರಕಟನೆ ಪುಸ್ತಕದಲ್ಲಿ ಅಗತ್ಯವೇ ಇರುತ್ತಿರಲಿಲ್ಲ (2:10).

**ಮುದ್ರೆ ಹಾಕಲ್ಪಟ್ಟವರ ಸಂಖ್ಯೆಯು ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಮಂದಿ**. ಈ ಈ

ಅಂಕಿಅಂಶವು ಅನೇಕರಿಗೆ ಬಿಡಿಸಲಾಗದ ಕಗ್ಗಂಟು ಆಗಿರುತ್ತದೆ. ಕೆಲವರು ಈ ಸಂಖ್ಯೆಯನ್ನು ಅಕ್ಷರಶಃ ತೆಗೆದುಕೊಳ್ಳತಕ್ಕದ್ದೆಂದು ವಾದಿಸಿರುತ್ತಾರೆ. ಆರಂಭಿಕ ಸೆವೆಂತ್-ಡೇ ಅಡ್ವೆಂಟಿಸ್ಟ್ ವಾದಿಗಳು ಅಂತಿಮವಾಗಿ ಕೇವಲ 144,000 ಮಂದಿ ಮಾತ್ರವೇ ರಕ್ಷಿಸಲ್ಪಟ್ಟು ಪರಲೋಕ ಸೇರುವರೆಂದು ಉಪದೇಶಿಸುತ್ತಿದ್ದರು. ಅವರ ಒಟ್ಟು ಸದಸ್ಯತ್ವವು ಈ ಸಂಖ್ಯೆಯನ್ನು ತಲುಪಿದಾಗ, ಅವು ಈ ರೀತಿ ಬೋಧಿಸುವದನ್ನು ನಿಲ್ಲಿಸಿ ಬಿಟ್ಟರು. ಇನ್ನು ಕೆಲವು ಚಿಕ್ಕ ಧಾರ್ಮಿಕ ಗುಂಪುಗಳು ಈಗಲೂ ಇದನ್ನು ಕಲಿಸುತ್ತವೆ. ಇದರ ಪ್ರಮುಖ ಪ್ರತಿಪಾದಕರೆಂದರೆ ಯೆಹೋವನ ಸಾಕ್ಷಿಗಳು, ಇವರು 144,000 ಮಂದಿ ಮಾತ್ರವೇ ಪರಲೋಕವನ್ನು ಸೇರುವರೆಂದು ವಾದಿಸುತ್ತಾರೆ.[9] ಕಪ್ಪು ವರ್ಣೀಯ ಮುಸ್ಲಿಮ್ ಜನರು ಈ ವಾಕ್ಯವನ್ನು ತಮ್ಮದಾಗಿಸಿಕೊಂಡು 144,000 ಮಂದಿ ಕಪ್ಪು ವರ್ಣೀಯ ಮುಸ್ಲಿಮ್ ಪುರುಷರು ಮಾತ್ರವೇ ಪರಲೋಕದಲ್ಲಿ ಸೇರುವರೆಂದು ಕಲಿಸುತ್ತಾರೆ. ಕೆಲವರ ಪ್ರಕಾರವಾಗಿ, 144,000 "ಸೂಪರ್-ದೇವರ ಜನರು" ಪರಲೋಕದಲ್ಲಿ ಪ್ರವೇಶಿಸುವದಕ್ಕೆ ಅನುಮತಿಸಲ್ಪಟ್ಟರೆ, ಮಿಕ್ಕವರು - "ಸಾಮಾನ್ಯ" ದೇವಜನರು - ನವೀಕರಿಸಲ್ಪಟ್ಟ ಭೂಮಿಯಲ್ಲಿಯೇ ಸಂತೃಪ್ತರಾಗಬೇಕಾಗುತ್ತದೆ. ಹೇಗೂ, ದೇವರ *ಪ್ರತಿಯೊಬ್ಬ* ನಂಬಿಗಸ್ತ ಮಗುವಿಗೂ "ಲಯ ಕಳಂಕ ಕ್ಷಯಗಳಿಲ್ಲ . . . ಬಾಧ್ಯತೆಯು. . . *ಪರಲೋಕದಲ್ಲಿ* ಇಡಲ್ಪಟ್ಟಿರುವದು" (1 ಪೇತ್ರ 1:4; ಒತ್ತಿ ಹೇಳಿದ್ದು ನನ್ನದು).

ಪ್ರಕಟನೆ ಪುಸ್ತಕದಲ್ಲಿ ಸಾಂಕೇತಿಕ ಅಂಕೆಗಳು ಪದೇ ಪದೇ ಬಳಸಲ್ಪಟ್ಟಿರುತ್ತವೆ. "ಹನ್ನೆರಡು" ಸಂಪೂರ್ಣತೆಯ ಸಂಖ್ಯೆಯಾಗಿದೆ, ಆದ್ದರಿಂದ "144" (ಹನ್ನೆರಡು ಪಟ್ಟು ಹನ್ನೆರಡು) ಎಂಬುದು "ಸಂಪೂರ್ಣತೆಯಲ್ಲಿನ ಸಂಪೂರ್ಣತೆ" ಆಗಿರುತ್ತದೆ. "ಸಾವಿರ" ಸಂಪೂರ್ಣತೆಗೆ ಮತ್ತೊಂದು ಸಂಕೇತವಾಗಿರುವದರಿಂದ, "144,000" (144 x 1,000) ಸಂಖ್ಯೆಯು "ಸಂಪೂರ್ಣತೆಯು ತೀಕ್ಷ್ಣಗೊಳ್ಳುವದು" ಎಂದು ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, "ಅಷ್ಟೇ ಇರುವದು; ಇನ್ನು ಅದನ್ನು ಮೀರಿ ಬೇರೇನೂ ಇರುವದಿಲ್ಲ!"

"144,000" ಸಂಖ್ಯೆಯ ಬಳಕೆಯಿಂದ ಏನನ್ನು ಕಲಿತುಕೊಳ್ಳಬಹುದಾಗಿದೆ? ಆ ಪಾಠವು ಏನೆಂದರೆ: *ಎಲ್ಲಾ* ದೇವರ ಜನರಿಗೆ ಮುದ್ರೆ ಹಾಕಲ್ಪಡುತ್ತದೆ. ಕರ್ತನು ತನ್ನ ಅನುಮೋದನೆಯ ಮತ್ತು ಭದ್ರತೆಯ ಮುದ್ರೆಯನ್ನು ತನ್ನ ಮಕ್ಕಳ ಮೇಲೆ ಹಾಕುವದಕ್ಕೆ ಮುಂದಾಗುವ ವೇಳೆ, ಆತನು ಒಬ್ಬ ವ್ಯಕ್ತಿಯನ್ನೂ ಬಿಟ್ಟು ಬಿಡಲಿಲ್ಲ; ಆತನು ಅವರೆಲ್ಲರಿಗೂ ಮುದ್ರೆ ಹಾಕಿದನು. ಈ ವಾಸ್ತವಾಂಶವು ಸೂಚಿಸುವದೇನೆಂದರೆ ದೇವರು ತನ್ನ ಜನರನ್ನು *ಬಲ್ಲನು* ಎಂಬದೆ. ಮುದ್ರೆ ಹಾಕುವದರ ಸಂಕೇತದಿಂದ ನಾವು ಕಲಿತುಕೊಳ್ಳಬಹುದಾದ ಬಹು ದೊಡ್ಡ ಸತ್ಯವು ಇದೇ ಆಗಿದೆ ಎಂಬುದನ್ನು 14ನೇ ಅಧ್ಯಾಯವು ಸ್ಪಷ್ಟಗೊಳಿಸಲಿದೆ. 14ನೇ ಅಧ್ಯಾಯದಲ್ಲಿ, 144,000 ಕುರಿಯಾದಾತನ ಸಂಗಡ ಚೀಯೋನ್ ಪರ್ವತದ ಮೇಲೆ ನಿಂತಿರುತ್ತಾರೆ, "ಅವರವರ ಹಣೆಯ ಮೇಲೆ ಆತನ ಹೆಸರೂ ಆತನ ತಂದೆಯ ಹೆಸರೂ ಬರೆಯಲ್ಪಟ್ಟಿದ್ದವು" (14:1).

ಮುದ್ರೆ ಒತ್ತಿಸಿಕೊಂಡ 144,000 ಮಂದಿಯು **ಇಸ್ರಾಯೇಲ್ಯರ ಪ್ರತಿಯೊಂದು ಕುಲಕ್ಕೆ ಸೇರಿದವರು** ಮತ್ತು ಇನ್ನು ಕೆಲವರು ಈ ಜನರು ಅಕ್ಷರಶಃ ಇಸ್ರಾಯೇಲ್ಯರೇ ಎಂಬ ನಿಲುವು ಹೊಂದಿರುತ್ತಾರೆ. ಇವರು ಸಾಮಾನ್ಯವಾಗಿ ನಂಬುವದೇನೆಂದರೆ 144,000 ಜನರು ಇಸ್ರಾಯೇಲ್ಯರಾಗಿದ್ದರೆ, 9ರಿಂದ 17 ಅಧ್ಯಾಯಗಳಲ್ಲಿ ಕಾಣಿಸುವ ಅಸಂಖ್ಯಾತ ಜನಸಮೂಹವು ಅನ್ಯಜನರಾಗಿದ್ದಾರೆ ಎಂಬುದೆ. 144,000 ಮಂದಿಯ ಕುರಿತು ಬರಲಾಗಿರುವ ಈ ನಿರ್ಧಾರವು ತಪ್ಪಾದದ್ದಾಗಿದೆ, ಅದಕ್ಕೆ ಕನಿಷ್ಠ ಮೂರು ಕಾರಣಗಳಿರುತ್ತವೆ:

1. ಕ್ರಿ. ಪೂ. 722ರಲ್ಲಿ ಅವರಲ್ಲಿ ಹತ್ತು ಕುಲಗಳು ಮೂಲಭೂತವಾಗಿ ತಮ್ಮ ಗುರುತನ್ನು ಕಳಕೊಂಡರು, ಮತ್ತು ಉಳಿದ ಎರಡು ಕುಲಗಳು ಕ್ರಿ.ಶ. 70ರಲ್ಲಿ ತನ್ನ ಗುರುತನ್ನು

ಕಳಕೊಂಡರು. ಕ್ರಿ.ಪೂ. 722ರಲ್ಲಿ, ಅಶ್ಶೂರ್ಯರು ಉತ್ತರದ ಕಡೆಯಲ್ಲಿದ್ದ ಇಸ್ರಾಯೇಲ್ ಕುಲಗಳನ್ನು ಗೆದ್ದುಕೊಂಡರು ಮತ್ತು ಇಸ್ರಾಯೇಲ್ಯರಲ್ಲಿ ಅನೇಕರನ್ನು ಸೆರೆಯಾಳುಗಳಾಗಿ ಕೊಂಡೊಯ್ದರು. ಕ್ರಿ.ಶ. 70ರಲ್ಲಿ, ರೋಮನ್ನರಿಂದ ಯೆರೂಸಲೇಮ್ ಪಟ್ಟಣವು ನಾಶಗೊಳಿಸಲ್ಪಟ್ಟಿತು, ಮತ್ತು ವಂಶಾವಳಿಯ ದಾಖಲೆಗಳು ಕಳೆದು ಹೋದವು. ಇಂದು, ಬಹಳಷ್ಟು ಯೆಹೂದ್ಯರಿಗೆ ತಾವು ಯಾವ ಕುಲಕ್ಕೆ ಸೇರಿದವರೆಂಬುದೇ ಗೊತ್ತಿರುವದಿಲ್ಲ.

2. ಪ್ರತ್ಯೇಕವಾದ ಕುಲಗಳು ಅಸ್ತಿತ್ವದಲ್ಲಿದ್ದಾಗ್ಯೂ, ಅವರ ಸಂಖ್ಯೆಗಳು ಬಹಳವಾಗಿ ವ್ಯತ್ಯಾಸವಾಗಿದ್ದವು. ಅವರಲ್ಲಿ ಪ್ರತಿಯೊಂದು ಕುಲದಿಂದ ಒಂದೇ ರೀತಿಯ ಸಂಖ್ಯೆಯಲ್ಲಿ (12,000) ಜನರನ್ನು ಆರಿಸಿಕೊಳ್ಳುವದು ಅಸಂಭವನೀಯವಾಗಿರುತ್ತದೆ.

3. ಕರ್ತನಿಗೆ ಈಗ ರಾಷ್ಟ್ರೀಯತೆಯು ಪ್ರಾಮುಖ್ಯ ಆಗಿರುವದೇ ಇಲ್ಲ. ಪೌಲನು ಹೀಗೆ ಬರೆದನು, "ಈ ವಿಷಯದಲ್ಲಿ ಯೆಹೂದ್ಯನಿಗೂ ಗ್ರೀಕನಿಗೂ ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರಿಗೂ ಒಬ್ಬನೇ ಕರ್ತ; ಆತನು ತನ್ನ ನಾಂವನ್ನು ಹೇಳಿಕೊಳ್ಳುವವರಿಗೆ ಹೇರಳವಾಗಿ ಕೊಡುವವನಾಗಿದ್ದಾನೆ" (ರೋಮಾ 10:12); "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ" (ಗಲಾತ್ಯ 3:28). Burton Coffman ಹೀಗೆ ಬರೆಯುತ್ತಾನೆ,

> ದೇವರು ಯೆಹೂದ್ಯರ ವಿಷಯದಲ್ಲಿ ಏನು ಮಾಡಲಿದ್ದಾನೆಂಬುದರ ಕುರಿತಾದ ಎಲ್ಲಾ ಮಾತುಕತೆಗಳು ನಿಷ್ಪ್ರಯೋಕವಾಗಿರುತ್ತದೆ, ಅಪಾರ್ಥಕ್ಕೆ ನಡಿಸುವಂತ್ತು, ಮತ್ತು [ಹೊಸ ಒಡಂಬಡಿಕೆಯಲ್ಲಿ] ಇರುವಂತದ್ದೆಲ್ಲದಕ್ಕೂ ತದ್ವಿರುದ್ಧವಾಗಿರುತ್ತದೆ. ದೇವರು ಇನ್ನು ಮೇಲೆ ಹೇಗೆ ಇರಾನಿಯನ್ನರು, ಡಚ್‌ರು, ಆಂಗ್ಲರು, ಅಥವಾ ಜಪಾನಿಯರಿಗೋಸ್ಕರ ವಿಶೇಷ ಯೋಜನೆಯೊಂದನ್ನು ಹೊಂದಿಲ್ಲವೋ ಅದೇ ರೀತಿ ಯೆಹೂದಿ ಜನಾಂಗಕ್ಕಾಗಿಯೂ ಆತನು ಯಾವದೇ ವಿಶೇಷವಾದ ಯೋಜನೆಯನ್ನು ಹೊಂದಿರುವದಿಲ್ಲ.[10]

**ವಚನಗಳು 5-8.** ಇಲ್ಲಿ ಪಟ್ಟಿ ಮಾಡಲಾಗಿರುವ ಹನ್ನೆರಡು ಕುಲಗಳು ಶಾರೀರಕವಾದ ಯೆಹೂದ್ಯರನ್ನು ಪ್ರತಿನಿಧಿಸುವದಿಲ್ಲವಾದಲ್ಲಿ, ಅವುಗಳು ಬೇರೆ ಇನ್ನೇನನ್ನು ಸೂಚಿಸುತ್ತವೆ? ಪ್ರಕಟನೆ ಪುಸ್ತಕದಲ್ಲಿ ಹಳೆಯ ಒಡಬಡಿಕೆ ಪರಿಭಾಷೆಯನ್ನು ಬಳಸುವಾಗ ಅನೇಕ ಸಾರಿ ಒಂದು "ಅನಿರೀಕ್ಷಿತ ತಿರುವು" ಇರುತ್ತದೆ. ಯೋಹಾನನು 144,000 ಮಂದಿಯೊಳಗಿದ್ದ ಕುಲಗಳ ಹೆಸರಿನ ಪಟ್ಟಿಯು ಇಲ್ಲಿರುತ್ತದೆ:

> **ಯೂದನ ಕುಲದಲ್ಲಿ ಮುದ್ರೆಹಾಕಿಸಿಕೊಂಡವರು ಹನ್ನೆರಡು ಸಾವಿರ, ರೂಬೇನನ ಕುಲದವರಲ್ಲಿ ಹನ್ನೆರಡು ಸಾವಿರ, ಗಾದನ ಕುಲದವರಲ್ಲಿ ಹನ್ನೆರಡು ಸಾವಿರ, ಅಷೇರನ ಕುಲದವರಲ್ಲಿ ಹನ್ನೆರಡು ಸಾವಿರ, ನೆಪ್ತಲೀಮನ ಕುಲದವರಲ್ಲಿ ಹನ್ನೆರಡು ಸಾವಿರ, ಮನಾಸ್ಸೆಯ ಕುಲದವರಲ್ಲಿ ಹನ್ನೆರಡು ಸಾವಿರ, ಸಿಮೆಯೋನನ ಕುಲದವರಲ್ಲಿ ಹನ್ನೆರಡು ಸಾವಿರ, ಲೇವಿಯ ಕುಲದವರಲ್ಲಿ ಹನ್ನೆರಡು ಸಾವಿರ, ಇಸ್ಸಕಾರನ ಕುಲದವರಲ್ಲಿ ಹನ್ನೆರಡು ಸಾವಿರ, ಜೆಬುಲೋನನ ಕುಲದವರಲ್ಲಿ ಹನ್ನೆರಡು ಸಾವಿರ, ಯೋಸೇಫನ ಕುಲದವರಲ್ಲಿ ಹನ್ನೆರಡು ಸಾವಿರ, ಬೆನ್ಯಾಮೀನನ ಕುಲದವರಲ್ಲಿ ಮುದ್ರೆ ಹಾಕಿಸಿಕೊಂಡವರು ಹನ್ನೆರಡು ಸಾವಿರ ಮಂದಿ ಇದ್ದರು.**

ಕುಲಗಳ ಪಟ್ಟಿಯು ಅಸಹಜವಾಗಿರುತ್ತದೆ: ಯೂದ, ರೂಬೇನ, ಗಾದ, ಅಷೇರ, ನೆಪ್ತಲೀಮ, ಮನಾಸ್ಎ, ಸಿಮೆಯೋನ, ಲೇಇ, ಇಸ್ಸಾಕಾರ, ಜೆಬುಲೋನ, ಯೋಸೇಫ, ಬೆನ್ಯಾಮೀನ. ಉದಾಹರಣೆಗೆ, ಪಟ್ಟಿಯಲ್ಲಿ ಮೊದಲನೆಯದಾಗಿ ಯೂದನ ಹೆಸರನ್ನು

ಹೇಳಿರುವರು ವಿಚಿತ್ರವಾಗಿರುತ್ತದೆ - ಅದು ಸಾಮಾನ್ಯವಾಗಿ, ಜೇಷ್ಠಪುತ್ರನಾಗಿರುವ ರೂಬೇನನಿಗಾಗಿ ಮೀಸಲಾಗಿರುವಂಥದ್ದಾಗಿದೆ (ನೋಡಿರಿ ಆದಿಕಾಂಡ 35:22-26; ಅರಣ್ಯಕಾಂಡ 13:4-15; ಧರ್ಮೋಪದೇಶಕಾಂಡ 33:6-29). ಯೇಸು ಈ ರಾಜವಂಸ್ಥ ಕುಲದಿಂದ ಬಂದದ್ದರಿಂದಾಗಿ ಯೂದನು ಮೊದಲು ಹೆಸರಿಸಲ್ಪಟ್ಟಿದ್ದಾನೆಂದು ಕೆಲವರು ಯೋಚಿಸುತ್ತಾರೆ (ಪ್ರಕಟನೆ 5:5). ಅಲ್ಲದೆ, ಈ ಪಟ್ಟಿಯಲ್ಲಿ ಲೇವಿಯನ್ನು ಸೇರಿಸಲಾಗಿದೆ, ಲೇವಿಯು ಯಾಕೋಬನ ಹನ್ನೆರಡು ಮಕ್ಕಳಲ್ಲಿ ಒಬ್ಬನಾಗಿದ್ದನು, ಆದರೆ ಆತನ ಸಂತತಿಯವರು "ಯಾಜಕದ್ಯೋಗದ ಕುಲ" ಆಗಿದ್ದರು ಮತ್ತು ಅವರು ಯಾವದೇ ಪ್ರಾಂತ್ಯವನ್ನು ಬಾಧ್ಯವಾಗಿ ಹೊಂದದೆ ಇದ್ದ ಕಾರಣ ಸಾಮಾನ್ಯವಾಗಿ ಅವರನ್ನು ಹನ್ನೆರಡು ಕುಲಗಳ ಪಟ್ಟಿಯಲ್ಲಿ ಸೇರಿಸಲಾಗಿರಲಿಲ್ಲ (ನೋಡಿರಿ ಅರಣ್ಯಕಾಂಡ 18:20-24; ಯೆಹೋಶುವ 13:14). ಲೇವಿಯು ಹಳೆಯ ಒಡಂಬಡಿಕೆಯಲ್ಲಿ ಹನ್ನೆರಡು ಕುಲಗಳಲ್ಲಿ ಒಬ್ಬನಾಗಿರದೆ ಅಳಿಸಿ ಹಾಕಲ್ಪಟ್ಟಿದ್ದನಾದ್ದರಿಂದ, ಆ ಸಂಖ್ಯೆಯನ್ನು ಪುನಃ ಹನ್ನೆರಡಕ್ಕೆ ತರುವದಕ್ಕೋಸ್ಕರ ಯೋಸೇಫನ ಇಬ್ಬರು ಪುತ್ರರಾದ ಎಪ್ರಾಯೀಮ್ ಮತ್ತು ಮನಾಸ್ಸೆಯರನ್ನು ಎರಡು ಕುಲಗಳಾಗಿ ಎಣಿಸಲಾಗಿತ್ತು. ಹೇಗೂ, ಪ್ರಕಟನೆ 7ನೇ ಅಧ್ಯಾಯದ ಪಟ್ಟಿಯಲ್ಲಿ, ಎಪ್ರಾಯೀಮ್ ಸ್ಥಾನದಲ್ಲಿ ಯೋಸೇಫನನ್ನು ಹೆಸರಿಸಲಾಗಿದೆ. ಅಂತಿಮವಾಗಿ, ಯಾಕೋಬನ ಇನ್ನೊಬ್ಬ ಮಗನಾದ ದಾನ್ ಎಂಬವನು ಈ ಪಟ್ಟಿಯಿಂದ ಕೈಬಿಡಲ್ಪಟ್ಟಿರುತ್ತಾನೆ.

ಎಪ್ರಾಯೀಮ್ ಮತ್ತು ದಾನ್ ಕುಲಗಳು ಏಕೆ ಕೈಬಿಡಲ್ಪಟ್ಟಿರುತ್ತವೆಂಬ ವಿಷಯದಲ್ಲಿ ಅನೇಕ ಊಹಾಪೋಹಗಳನ್ನು ಮಾಡಿಕೊಳ್ಳುತ್ತಾರೆ. ಈ ಕುಲಗಳು ಮಿಕ್ಕ ಕೆಲವು ಕುಲಗಳಿಗಿಂತಲೂ ಹೆಚ್ಚಾಗಿ ವಿಗ್ರಹಾರಾಧನೆಯೊಂದಿಗೆ ಗುರುತಿಸಿಕೊಂಡಿದ್ದವೆಂಬುದನ್ನು ಕೆಲವರು ಗಮನಕ್ಕೆ ತರುತ್ತಾರೆ (ಓದಿರಿ ನ್ಯಾಯಸ್ಥಾಪಕರು 18:30; 1 ಅರಸು 12:26-29). ಈ ಪಟ್ಟಿಯನ್ನು ಉದ್ದೇಶಪೂರ್ವಕವಾಗಿಯೇ ಹಳೆಯ ಒಡಂಬಡಿಕೆಯ ಪಟ್ಟಿಗಿಂತ ವ್ಯತ್ಯಾಸವಾಗಿರುವಂತೆ ಸೇರಿಸಲಾಗಿರುತ್ತದೆಂಬುದನ್ನು ಅರ್ಥಮಾಡಿಕೊಳ್ಳದ ಕೆಲವರು ಈ ಪಟ್ಟಿಯನ್ನು "ತಿದ್ದುವದಕ್ಕೆ" ದೊಡ್ಡ ಜಾಣ್ಮೆಯನ್ನು ಬಳಸಿರುತ್ತಾರೆ, ವಚನಗಳನ್ನು ಮರುಕ್ರಮಪಡಿಸುವ ಮಟ್ಟಿಗೂ ಹೋಗಿರುತ್ತಾರೆ. ದಾನ್‌ನು ಪಟ್ಟಿಯಿಂದ ಕೈಬಿಡಲ್ಪಟ್ಟಿದ್ದಾನಾದ್ದರಿಂದ, ಈ ಹಂತದಲ್ಲಿ ಮೂಲ ಹಸ್ತಪ್ರತಿಯಲ್ಲಿ Δάν ("ದಾನ್") ಎಂದಿತ್ತು, ಆದರೆ ಕೆಲವು ನಕಲುಗಾರರು ಅದನ್ನು Μάν ("ಮಾನ್") ಎಂದು ಮಾಡಿರುತ್ತಾರೆ, ಅದನ್ನು ಅನಂತರದಲ್ಲಿ ಉದ್ದಗೊಳಿಸಿ Μανασσῆ ("ಮನಾಸ್ಸೆ") ಎಂದು ಮಾಡಲಾಯಿತು ಎಂದು ಇವರು ಊಹೆಯನ್ನು ಮಾಡುತ್ತಾರೆ. ವಾಕ್ಯವನ್ನು "ಉತ್ತಮಗೊಳಿಸುವಿಕೆ" ಎಂದು ಕರೆಯುವ ಯಾವ ಸಂಗತಿಯನ್ನು ಬೆಂಬಲಿಸುವದಕ್ಕೆ ಯಾವ ಪುರಾವೆಯೂ ಇರುವದಿಲ್ಲ. ಈ ಎರಡು ಕುಲಗಳು ಕೈಬಿಡಲ್ಪಟ್ಟಿರುವದಕ್ಕೆ ಯಾವದೇ ಮಹತ್ವವಿರುತ್ತದೋ ಎಂಬುದು ನಮಗೆ ಗೊತ್ತಿಲ್ಲ, ಆದರೆ ಈ ಪಟ್ಟಿಯಲ್ಲಿರುವ ಗಮನಾರ್ಹವಾದ "ತಿರುವುಗಳು" ಈ ವಾಕ್ಯಭಾಗವು ಅಕ್ಷರಶಃ ಯೆಹೂದ್ಯರನ್ನು ಸೂಚಿಸುವ*ದಿಲ್ಲ* ಎಂಬುದನ್ನು ನಮಗೆ ತಿಳಿಯಪಡಿಸುವ ಒಂದು ದೈವಿಕ ತಂತಿ ಸಮಾಚಾರ ಆಗಿರುತ್ತದೆ.[11]

ಹಾಗಾದರೆ, ಈ ವಾಕ್ಯಭಾಗವು ಯಾರನ್ನು ಸೂಚಿಸುತ್ತದೆ? ಈ ಮುದ್ರೆ ಹಾಕಲ್ಪಟ್ಟವರು ದೇವರ "ದಾಸರು" ಎಂಬುದನ್ನು 3ನೇ ವಚನವು ಗಮನಕ್ಕೆ ತರುತ್ತದೆ. 1:1ರಲ್ಲಿ, "ದಾಸರು" ಎಂಬ ಪದವು ಕ್ರೈಸ್ತರನ್ನು ಸೂಚಿಸುವದಾಗಿತ್ತು, ಮತ್ತು 7:3ರಲ್ಲಿ ಸಹ ಅದೇ ಅರ್ಥವನ್ನು ಹೊಂದಿರುವಂತೆ ಕಾಣಿಸುತ್ತದೆ. ಮುದ್ರೆ ಹಾಕಲ್ಪಟ್ಟ 144,000 ಮಂದಿ ನಿಶ್ಚಯವಾಗಿಯೂ ಯೇಸುವಿನ ಹಿಂಬಾಲಕರಾಗಿದ್ದರು. ಈ ಪುಸ್ತಕದ ಉದ್ದೇಶವು ಹಿಂಸೆಗೊಳಗಾಗಿದ್ದ *ಕ್ರೈಸ್ತರನ್ನು*

ಸಂತೈಸುವದೇ ಆಗಿತ್ತೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ, ಅವರು ಯೆಹೂದಿ ಕ್ರೈಸ್ತರೇ ಆಗಿದ್ದರೂ ಸರಿಯೇ ಅಥವಾ ಅನ್ಯಜನಾಂಗದ ಕ್ರೈಸ್ತರು ಆಗಿದ್ದರೂ ಸರಿಯೇ.

144,000 ಸಂಖ್ಯೆಯು *ಯಾವದೇ* ಕ್ರೈಸ್ತರನ್ನು ಸೂಚಿಸಬಹುದಾಗಿದೆ - ಹೊರತು *ರಕ್ತಸಾಕ್ಷಿಯಾಗಿ* ಮರಣಿಸಿರುವ ಕ್ರೈಸ್ತರನ್ನಷ್ಟೆ ಅಲ್ಲ - ಎಂಬುದನ್ನು ಗಮನಿಸತಕ್ಕದ್ದು. ಈ ವಾಸ್ತವಾಂಶವನ್ನು ಪ್ರಸ್ತಾಪಿಸಲೇ ಬೇಕಾಗಿರುತ್ತದೆ ಯಾಕೆಂದರೆ ರಕ್ತಸಾಕ್ಷಿಯಾಗಿ ಮರಣಿಸುವದರಲ್ಲಿ ಒಂದು ವಿಶೇಷವಾದ ಸದ್ಗುಣವು ಕಂಡುಬರುತ್ತದೆಂದು ಆದಿ ಕ್ರೈಸ್ತರಲ್ಲಿ ಕೆಲವರು ನಂಬಿದ್ದರು. ಈ ವಿಚಾರದ ಕುರಿತಾಗಿ Coffmanನ ವ್ಯಾಖ್ಯಾನವು ಗಮನಿಸುವದಕ್ಕೆ ಯೋಗ್ಯವಾಗಿರುತ್ತದೆ:

> ಒಂದು ರಕ್ತಸಾಕ್ಷಿಯ ಕಿರೀಟವು ಒಂದೇ ಒಂದು ದೃಢನಿಶ್ಚಯ ಮತ್ತು ವೀರ ಕೃತ್ಯದಿಂದ ಗೆದ್ದುಕೊಳ್ಳಬಹುದು (ಮತ್ತು ಅದು ನಿಜಕ್ಕೂ ಮಹಿಮಕರವಾದದ್ದೇ); ಆದರೆ ಆ ಕಿರೀಟವನ್ನು ಕೊನೆಗೆ ಸಹಜ ಸಾವಿನಿಂದ ಅಂತ್ಯಗೊಳ್ಳುವ ವರೆಗೂ ಒಬ್ಬ ನಿಜವಾದ ಕ್ರೈಸ್ತನ ಜೀವಿತ ಕಾಲವೆಲ್ಲಾ ವಿರುದ್ಧವಾಗಿ ಬರುವ ಸಕಲ ದ್ವೇಷವನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ಮೂಲಕ ಆ ಕಿರೀಟವನ್ನು ಗೆದ್ದುಕೊಳ್ಳುವದು ಸಹ ಅಷ್ಟೇ ಉದಾತ್ತವಾಗಿರುತ್ತದೆ.[12]

ಈ 144,000 ಮಂದಿ ಕ್ರೈಸ್ತರಾಗಿದ್ದರೆಂಬ ನಿರ್ಧಾರಕ್ಕೆ ಬರುವದು ಇನ್ನೊಂದು ಪ್ರಶ್ನೆಯನ್ನು ಎಬ್ಬಿಸುತ್ತದೆ: 4ರಿಂದ 8 ವಚನಗಳು ಕ್ರೈಸ್ತರನ್ನು ಸೂಚಿಸುವದಾದರೆ, ವಾಕ್ಯಭಾಗವು ಏಕೆ *ಯೆಹೂದಿ* ಕುಲಗಳ ಸಾಂಕೇತಿಕತೆಯನ್ನು ಬಳಸುತ್ತದೆ? ಇದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದಾಗಿದೆ:

1. ಈ ಸಾಂಕೇತಿಕತೆಯು ಪ್ರಕಟನೆ ಪುಸ್ತಕದುದ್ದಕ್ಕೂ ಕ್ರೈಸ್ತ ವಿಚಾರಗಳನ್ನು ಮತ್ತು ಭಾವನೆಗಳನ್ನು ಸೂಚಿಸುತ್ತಾ ಬಳಸಲಾಗಿರುವ ಯೆಹೂದಿ ಪರಿಭಾಷೆಯೊಂದಿಗೆ ಹೊಂದಿಕೆಯಾಗಬಲ್ಲದ್ದಾಗಿದೆ.

2. ಈ ಸಾಂಕೇತಿಕತೆಯು *ಸಭೆಯು ಆತ್ಮೀಕ ಇಸ್ರಾಯೇಲ್* ಆಗಿದೆ ಎಂಬ ಹೊಸ ಒಡಂಬಡಿಕೆಯ ಉಪದೇಶಕ್ಕೆ ಹೊಂದಿಕೆಯಾಗಬಲ್ಲದ್ದಾಗಿದೆ. ಪ್ರಕಟನೆ 2 ಮತ್ತು 3 ಅಧ್ಯಾಯಗಳು "ತಮ್ಮನ್ನು ಯೆಹೂದ್ಯರೆಂದು ಹೇಳಿಕೊಳ್ಳುವವರು . . . ಅವರು ಯೆಹೂದ್ಯರಲ್ಲ" ಎಂಬ ಬಗ್ಗೆ ಮಾತಾಡುತ್ತದೆ (2:9; ನೋಡಿರಿ 3:9). ಆ ವಾಕ್ಯಭಾಗಗಳು ಇವರು ಯೇಸುವು ಮೆಸ್ಸೀಯನೆಂಬುದನ್ನು ತಿರಸ್ಕರಿಸಿದ್ದ *ಶಾರೀರಿಕ* ಯೆಹೂದ್ಯರು ಎಂಬುದನ್ನು ಒತ್ತಿ ಹೇಳಿದವು (2:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರೋಮಾ 2:28, 29 ಹೀಗೆ ಹೇಳುತ್ತದೆ, "ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ; ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು; ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮಸಂಬಂಧಪಟ್ಟದ್ದೇ . . . (RSV). "ಅಬ್ರಹಾಮನ ವಂಶದಲ್ಲಿ ಹುಟ್ಟಿದ ಮಾತ್ರಕ್ಕೆ" (ರೋಮಾ 9:7; ನೋಡಿರಿ ರೋಮಾ 9:6) ಯೆಹೂದ್ಯರು ಇನ್ನು ಮೇಲೆ ದೇವರ ವಿಶೇಷವಾದ ಜನರಾಗಿರುವದಿಲ್ಲ. ಬದಲಾಗಿ, ಅಬ್ರಹಾಮನು ಈಗ *ನಂಬುವವರೆಲ್ಲರಿಗೂ* . . . ಮೂಲತಂದೆಯಾದನು" (ರೋಮಾ 4:11; ಒತ್ತಿ ಹೇಳಿದ್ದು ನನ್ನದು; ನೋಡಿರಿ ಗಲಾತ್ಯ 3:7, 29). ಇಂದು, ಸಭೆಯು "ದೇವರ ಇಸ್ರಾಯೇಲ್" ಆಗಿರುತ್ತದೆ (ಗಲಾತ್ಯ 6:16). "ನಿಜವಾದ ಸುನ್ನತಿಯವರು" ಯಾರೆಂದರೆ "ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ" ಆದ ಜನರೇ (ಫಿಲಿಪ್ಪಿ 3:3).

3. ಇಸ್ರಾಯೇಲ್ಯರ ವಿಷಯವಾಗಿ ದೇವರು ಹೊಂದಿದ್ದ ಮೂಲ ಉದ್ದೇಶವನ್ನು

ಸಭೆಯು ನೆರವೇರಿಸುತ್ತಿದೆ ಎಂಬ ವಾಸ್ತವಾಂಶದೊಂದಿಗೆ ಈ ಸಾಂಕೇತಿಕೆಯು ಸಾಮಂಜಸ್ಯತೆಯನ್ನು ಹೊಂದಿದೆ. ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರನ್ನು ಸೂಚಿಸುವದಕ್ಕೆ ಬಳಸುತ್ತಿದ್ದ ಪದಗಳು ಇಂದು ಸಭೆಯನ್ನು ಸೂಚಿಸಿ ಬಳಸಲಾಗುತ್ತಿದೆ: ಸಭೆಯು "ದೇವರು ಸಂಪಾದಿಸಿಕೊಂಡ ಜನರು" ಆಗಿರುತ್ತದೆ (ಎಫೆಸ 1:14; ನೋಡಿರಿ ತೀತನಿಗೆ 2:14) ಮತ್ತು ದೇವರ "ಮೀಸಲಾದ ಜನ" ಆಗಿರುತ್ತದೆ (1 ಪೇತ್ರ 2:9).

## ಸಿಂಹಾಸನದ ಸುತ್ತಲು ಇದ್ದ ಅಸಂಖ್ಯಾತ ಜನಸಮೂಹ (7:9-17)

### ಮಹಾ ಸಮೂಹವು ದೇವರನ್ನು ಸ್ತುತಿಸುತ್ತಿರುವದು (7:9-12)

**[9]ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವದನ್ನು ಕಂಡೆನು. ಅವರು ಸಕಲ ಜನಾಂಗಕುಲ ಪ್ರಜೆಗಳವರೂ ಸಕಲಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು. [10]ಅವರು - ಸಿಂಹಾಸನಾಸೀನನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ ಎಂದು ಮಹಾ ಶಬ್ದದಿಂದ ಕೂಗಿದರು. [11]ಅಷ್ಟರಲ್ಲಿ ದೇವದೂತರೆಲ್ಲರೂ ಸಿಂಹಾಸನವು ಹಿರಿಯರು ನಾಲ್ಕು ಜೀವಿಗಳು ಇವುಗಳ ಸುತ್ತಲು ನಿಂತುಕೊಂಡಿದ್ದರು. ಅವರು ಸಿಂಹಾಸನದ ಮುಂದೆ ಅಡ್ಡ ಬಿದ್ದು - [12]ಆಮೆನ್. ಸ್ತೋತ್ರವೂ ಪ್ರಭಾವವೂ ಜ್ಞಾನವೂ ಕೃತಜ್ಞ ತಾಸ್ತುತಿಯೂ ಮಾನವೂ ಬಲವೂ ಶಕ್ತಿಯೂ ನಮ್ಮ ದೇವರಿಗೆ ಯುಗಯುಗಾಂತರ ಗಳಲ್ಲಿಯೂ ಇರಲಿ, ಆಮೆನ್ ಎಂದು ಹೇಳುತ್ತಾ ದೇವರನ್ನು ಆರಾಧಿಸಿದರು.**

4ನೇ ಅಧ್ಯಾಯದಲ್ಲಿ, ಅಲ್ಲೊಂದು ಸಿಂಹಾಸನವಿತ್ತು ಮತ್ತು ಬಳಿಕ ಹಿರಿಯರು ಹಾಗೂ ಜೀವಿಗಳು ಇದ್ದರು. 5ನೇ ಅಧ್ಯಾಯದಲ್ಲಿ, ಯಜ್ಞದ ಕುರಿಯಾದಾತನು ಮತ್ತು ದೇವದೂತರು ಅವರೊಂದಿಗೆ ಸಿಂಹಾಸನದ ಕೋಣೆಯಲ್ಲಿ ಕೂಡಿಕೊಳ್ಳುತ್ತಾರೆ.

ಈ ಮಹಾ ಸಮೂಹವು ಯಾರಾಗಿದ್ದರು? ಇದು ಮೂಲಭೂತವಾಗಿ 1ರಿಂದ 8 ವಚನಗಳಲ್ಲಿ ಉಲ್ಲೇಖಿಸಲಾಗಿರುವ ಅದೇ ಗುಂಪು ಆಗಿರುತ್ತದೆ. ಈ ಹೇಳಿಕೆಯನ್ನು ಅರ್ಹಗೊಳಿಸುವದಕ್ಕೆ "ಮೂಲಭೂತವಾಗಿ" ಎಂಬ ಪದದ ಬಳಕೆಯು ಅವಶ್ಯಕವಾಗಿರುತ್ತದೆ, ಯಾಕೆಂದರೆ ದೀಕ್ಷಾಸ್ನಾನದ ವೇಳೆ ಮುದ್ರೆ ಹಾಕಲ್ಪಟ್ಟು ಬಿಟ್ಟರೆ ಆತನು "ಸಾಯಬೇಕಾದರೂ ನಂಬಿಗಸ್ತನಾಗಿರುವನು" ಎಂಬ ಖಚಿತತೆಯು ಇರುವದಿಲ್ಲ (2:10). ಬಹುಪಾಲು ವ್ಯಾಖ್ಯಾನಕಾರರು ಈ ಮಹಾ ಸಮೂಹವು ಸಾರಭೂತವಾಗಿ 144,000ಕ್ಕೆ ಸಮಾನವಾಗಿರುತ್ತದೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಸಮ್ಮತಿಯನ್ನು ನೀಡದವರು ಇವೆರಡೂ ಗುಂಪುಗಳಲ್ಲಿ ಕಾಣಬಹುದಾದ ವ್ಯತ್ಯಾಸಗಳನ್ನು ಎತ್ತಿ ತೋರಿಸುತ್ತಾರೆ:

1. ಮೊದಲನೆಯ ಗುಂಪಿನಲ್ಲಿ ಯೆಹೂದ್ಯರು ಇದ್ದರೆ, ಈ ಎರಡನೆಯ ಗುಂಪಿನಲ್ಲಿದ್ದವರು ಅನ್ಯಜನರು ಆಗಿದ್ದರು ಎಂದು ಕೆಲವರು ವಾದಿಸುತ್ತಾರೆ. ಹೇಗೂ, 144.000 ಮಂದಿಯು ಆತ್ಮೀಕ ಇಸ್ರಾಯೇಲ್ ಆಗಿರುವ ಸಭೆಯನ್ನು ಪ್ರತಿನಿಧಿಸುತ್ತದೆ - ಮತ್ತು ರಕ್ಷಣೆ ಹೊಂದಿದವರೆಲ್ಲರಿಗೂ ಸಂಕೇತವಾಗಿರುತ್ತಾರೆ (ವ. 4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮಹಾ ಸಮೂಹವು "*ಸಕಲ* ಜನಾಂಗ" ಗಳಿಗೆ ಸೇರಿದ ಜನರನ್ನು ಒಳಗೊಂಡಿತ್ತು (ವ. 9; ಒತ್ತಿ ಹೇಳಿದ್ದು ನನ್ನದು) - ಹೊರತು ಯೆಹೂದ್ಯರನ್ನು *ಹೊರತು ಪಡಿಸಿ* ಸಕಲ ಜನಾಂಗಗಳು

ಎಂಬುದಲ್ಲ. ಆದದರಿಂದ ಎರಡೂ ಗುಂಪುಗಳೊಳಗೆ ರಕ್ಷಣೆ ಹೊಂದಿರುವ ಸಕಲ ಜನರು ಸೇರಿರುತ್ತಾರೆ, ಅವರು ಒಂದು ಯೆಹೂದಿ ಹಿನ್ನಲೆಯವರಾಗಿದ್ದರೂ ಸರಿಯೇ ಅಥವಾ ಅನ್ಯಜನಾಂಗದ ಹಿನ್ನಲೆಯನ್ನು ಹೊಂದಿದ್ದರೂ ಸರಿಯೇ.

2. ಮೊದಲನೆಯ ಗುಂಪಿನ ಸಂಖ್ಯೆಯು ಹೇಳಲ್ಪಟ್ಟಿದ್ದರೆ, ಎರಡನೆಯ ಗುಂಪಿನಲ್ಲಿರುವ ಜನರ ಸಂಖ್ಯೆಯನ್ನು ಹೇಳಲಾಗಿಲ್ಲ ಎಂಬುದು ಮಹತ್ವಪೂರ್ಣವಾದದ್ದೆಂದು ಕೆಲವರು ಯೋಚಿಸುತ್ತಾರೆ. ಆದಾಗ್ಯೂ, ಗಮನಿಸತಕ್ಕದ್ದೇನಂದರೆ, ಯೋಹಾನನು ಕಂಡಿದ್ದು ಎರಡು ದೊಡ್ಡ ಜನಸಮೂಹಗಳನ್ನು ಆಗಿತ್ತು. ಮೊದಲನೆಯ ಗುಂಪಿನಲ್ಲಿದ್ದವರ ಸಂಖ್ಯೆಯನ್ನು ಆತನು *ಎಣಿಸಲಿಲ್ಲ*; ಆ ಸಂಖ್ಯೆಯು ಆತನಿಗೆ ತಿಳಿಸಲ್ಪಟ್ಟಿತು. ಖಂಡಿತವಾಗಿಯೂ, 4ನೇ ವಚನದಲ್ಲಿರುವ 144,000 ಅಂಕಿಯು ಅಕ್ಷರಶಃ ಆಗಿರುವದಿಲ್ಲ, ಆದರೆ ಸಾಂಕೇತಿಕವಾಗಿರುತ್ತದೆ. ಒಂದು ಗುಂಪಿನಲ್ಲಿದ್ದವರ ಸಂಖ್ಯೆಯನ್ನು ತಿಳಿಸಿದ್ದು ಮತ್ತು ಇನ್ನೊಂದು ಗುಂಪಿನಲ್ಲಿ ಸೇರಿ ಬಂದವರ ಸಂಖ್ಯೆಯನ್ನು ಉಲ್ಲೇಖಿಸದಿರುವದು ಎರಡೂ ಗುಂಪುಗಳು ಮೂಲಭೂತವಾಗಿ ಒಂದೇ ಆಗಿದ್ದವು ಎಂಬ ಮುಕ್ತಾಯಕ್ಕೆ ಬರುವ ವಿಷಯದಲ್ಲಿ ಯಾವ ಸಮಸ್ಯೆಯನ್ನೂ ಉಂಟು ಮಾಡುವದಿಲ್ಲ.

7ನೇ ಅಧ್ಯಾಯದಲ್ಲಿನ ಎರಡು ದೃಶ್ಯಗಳು ಪೂರಕವಾದವುಗಳಾಗಿವೆ. ಮೊದಲನೆಯ ದೃಶ್ಯವು (ವಚನಗಳು 1-8) ಗಾಳಿಗಳನ್ನು ಬಿಚ್ಚಿ ಬಿಡುವ ವೇಳೆ ಉಂಟಾಗುವ ನಾಶನದಿಂದ ರಕ್ಷಿಸುವದಕ್ಕಾಗಿ ಕ್ರೈಸ್ತರಿಗೆ ಮುದ್ರೆ ಹಾಕುವ ಕುರಿತಾಗಿ ಹೇಳುತ್ತದೆ. 144,000 ಮಂದಿ ಸಭೆಯ ಎಲ್ಲಾ ಸದಸ್ಯರನ್ನು - ಗತಕಾಲದ, ವರ್ತಮಾನದ, ಮತ್ತು ಭವಿಷ್ಯದ ಸದಸ್ಯರು - ಪ್ರತಿನಿಧಿಸುವದಾಗಿದೆ. *ಪ್ರತಿಯೊಬ್ಬ* ಕ್ರೈಸ್ತನಿಗೂ ಮುದ್ರೆ ಹಾಕಿ ಕಾಪಾಡಲಾಗುತ್ತದೆ. ಆ ಪರಿಸ್ಥಿತಿಯು ಒಂದು ಪ್ರಶ್ನೆಯು ಉದ್ಭವವಾಗುವಂತೆ ಮಾಡುತ್ತದೆ: ದೇವರು ಒದಗಿಸುವ ಭದ್ರತೆಯು ಸಾಕಾದದ್ದೋ? ಅದು ಪರಿಣಾಮಕರವೋ? ಎರಡನೆಯ ದೃಶ್ಯವು (ವಚನಗಳು 9-17) ಆ ಪ್ರಶ್ನೆಗೆ ಉತ್ತರವನ್ನು ಕೊಡುತ್ತದೆ: "ಹೌದು!" ಮಹಾ ಸಮೂಹವು "ಮಹಾ ಹಿಂಸೆಯನ್ನು" ಅನುಭವಿಸಿ ಬದುಕುಳಿಯುತ್ತಾರೆ (ವ. 14). ಮುದ್ರೆ ಹಾಕಲ್ಪಟ್ಟವರು ವಿನಾಶದ ಗಾಳಿಗಳಿಂದ ನಾಶಗೊಳಿಸಲ್ಪಡಲಿಲ್ಲ, ಆದರೆ ಬದಲಾಗಿ ಸುರಕ್ಷಿತವಾಗಿಯೂ ಭದ್ರವಾಗಿಯೂ ದೇವರ ಸನ್ನಿಧಿಗೆ ಬಂದು ಸೇರಿದ್ದರು. 144,000 ಮಂದಿಯು ಯುದ್ಧದ *ಮುಂಚಿನ* ದೇವರ ಜನರನ್ನು ಪ್ರತಿನಿಧಿಸುತ್ತದೆ, ಅದೇ ವೇಳೆಯಲ್ಲಿ ಮಹಾಸಮೂಹವು ಯುದ್ಧದ *ನಂತರದ* ಜಯಶಾಲಿಗಳಾದ ದೇವರ ಜನರನ್ನು ಪ್ರತಿನಿಧಿಸುತ್ತದೆ.

7ನೇ ಅಧ್ಯಾಯದ ಮೊದಲನೆಯ ದೃಶ್ಯದಲ್ಲಿ "ಯುದ್ಧನಿರತ ಸಭೆ" ಭೂಮಿಯ ಮೇಲಿರುತ್ತದೆ; ಕಡೇ ದೃಶ್ಯದಲ್ಲಿ, "ವಿಜಯಿಶಾಲಿ ಸಭೆ"[13] ಪರಲೋಕದಲ್ಲಿ ಇರುತ್ತದೆ. ಮೊದಲನಯೆ ದೃಶ್ಯವು ಕ್ರೈಸ್ತರು ಪಾರುಮಾಡಲ್ಪಡುವದನ್ನು ಚಿತ್ರಿಸಿದರೆ, ಎರಡನೆಯ ದೃಶ್ಯವು ಕ್ರೈಸ್ತರಿಗೆ ಪ್ರತಿಫಲ ಕೊಡಲ್ಪಡುವದನ್ನು ಬಣ್ಣಿಸುತ್ತದೆ. 1ರಿಂದ 8 ವಚನಗಳು ಈಗಿನ ಭದ್ರತೆಯ ಸುತ್ತಲು ಕೇಂದ್ರಿಕೃತವಾಗಿದ್ದರೆ, 9ರಿಂದ 17 ವಚನಗಳು ಅಂತಿಮವಾದ ರಕ್ಷಣೆಯನ್ನು ಕೊಂಡಾಡುವದರ ಸುತ್ತಲು ಕೇಂದ್ರಿಕೃತವಾಗಿರುತ್ತದೆ. Robert Mounceನು 7:9-17 ವಚನಗಳನ್ನು "ಶಾಸ್ತ್ರದಲ್ಲಿಯೇ ಸಿಕ್ಕಬಹುದಾದ ಪರಲೋಕದ ಸ್ಥಿತಿಯ ಕುರಿತಾದ ಅತ್ಯಂಥ ಉನ್ನತವಾದ ಚಿತ್ರಣಗಳಲ್ಲೊಂದಾಗಿದೆ" ಎಂದು ಕರೆಯುತ್ತಾನೆ.[14] ಈ ಅಧ್ಯಾಯವು "ಹಿಂಸೆಗೊಳಪಟ್ಟವರ ಆಶ್ರಯದ ಕುರಿತು, ಭಕ್ತಿವಂತರ ಸಂತೋಷ ಮತ್ತು ವಿಮೋಚಿಸಲ್ಪಟ್ಟವರೆಲ್ಲರ ಗುರಿಯನ್ನು ಕುರಿತು"[15] ತಿಳಿಸುತ್ತದೆ ಎಂದು Merrill C. Tenneyನು ಹೇಳುತ್ತಾನೆ. ಪ್ರಕಟನೆ 7:9-13 ಪರಲೋಕದ ಕುರಿತ ಬಣ್ಣನೆಯನ್ನು

ಮಾಡುವದಾಗಿರುತ್ತದೆ ಎಂದು ಕೆಲವರು ನಂಬುವದಿಲ್ಲ,[16] ಆದರೆ ವಾಕ್ಯಭಾಗವು ಪರಲೋಕದ ಚಿತ್ರವನ್ನು ಹೊಂದಿರುವದಿಲ್ಲವಾದರೂ, ಅದು ಪರಲೋಕದ ಒಂದು *ಮುನ್‌ರುಚಿಯನ್ನಂತೂ* ನಮಗೆ ನೀಡುತ್ತದೆ ಎಂಬುದನ್ನು ಬಹಳಷ್ಟು ಜನರು ಒಪ್ಪಿಕೊಳ್ಳುತ್ತಾರೆ.

ಪ್ರಕಟನೆ ಪುಸ್ತಕವು ಮೊದಲನೆಯ ಶತಮಾನದಲ್ಲಿ ಮರಣವನ್ನು ಎದುರಿಸುತ್ತಿದ್ದವರಿಗೆ ಆದರಣೆಯನ್ನು ನೀಡುವದಕ್ಕೋಸ್ಕರ ಬರೆಯಲ್ಪಟ್ಟಿತು - ಮತ್ತು ಅದು ಈ ದಿನದಲ್ಲಿ ಸಹ ಆದರಣೆಯನ್ನು ತರುವದನ್ನು ಮುಂದುವರೆಸಿರುತ್ತದೆ. ಆದಿ ಕ್ರೈಸ್ತರು ಈ ವಚನಗಳನ್ನು ಓದಿದಾಗ, ಆ ವಚನಗಳು ಅವರಿಗೆ "ನೀವು ರೋಮನ್ ಸಾಮ್ರಾಜ್ಯವನ್ನು ಎದುರಿಸುವಾಗ ದೇವರು ನಿಮ್ಮ ಸಂಗಡ ಇರುವನು ಮತ್ತು ನಿಮ್ಮನ್ನು ಕಾಪಾಡುವನು. ರೋಮನ್ ಸಾಮ್ರಾಜ್ಯವು ನಿಮ್ಮನ್ನು ಕೊಲ್ಲುವದಾದರೆ ಸಹ, ಅದರಿಂದಾಗುವ ಏಕೈಕ ಫಲಿತವೆಂದರೆ ನೀವು ಕರ್ತನೊಂದಿಗೆ ಇರುವದಕ್ಕಾಗಿ ನಿವಾಸಕ್ಕೆ ಹೋಗುವಿರಷ್ಟೆ" ಎಂದು ಹೇಳುವವುಗಳಾಗಿದ್ದವು. ಅದೇ ವಾಕ್ಯಭಾಗವು ಪ್ರತಿಯೊಬ್ಬ ಕ್ರೈಸ್ತನಿಗೂ ಜೀವನವು ಏನೇ ಸಮಸ್ಯೆಯನ್ನು ತಂದರೂ ಸರಿಯೇ, ನಾಳೆಯ ದಿನವು ಒಂದು ಹೆಚ್ಚು ಪ್ರಕಾಶಮಾನ ದಿನವಾಗಿರಲಿದೆ ಎಂದು ವಾಗ್ದಾನ ಮಾಡುವದಾಗಿದೆ.

**ವಚನ 9.** ಈ ವಿಭಾಗವು ಸಿಂಹಾಸನದ ಸುತ್ತಲು ವಿಮೋಚಿಸಲ್ಪಟ್ಟವರು ನಿಂತಿರುವ ಚಿತ್ರಣದೊಂದಿಗೆ ಆರಂಭಗೊಳ್ಳುತ್ತದೆ:

> **ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವದನ್ನು ಕಂಡೆನು. ಅವರು ಸಕಲ ಜನಾಂಗಕುಲ ಪ್ರಜೆಗಳವರೂ ಸಕಲಭಾಷೆಯನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು.**

ಯೋಹಾನನು **ಮಹಾ ಸಮೂಹವನ್ನು ಕಂಡನು, ಅದು ಯಾರೂ ಎಣಿಸಲಾಗದಷ್ಟು ದೊಡ್ಡದಾಗಿತ್ತು**. ಅಬ್ರಹಾಮನ ಸಂತತಿಯು ಭೂಮಿಯ ಧೂಳಿನಷ್ಟು, ಆಕಾಶದ ನಕ್ಷತ್ರಗಳಷ್ಟು ಮತ್ತು ಸಮುದ್ರದ ಮರುಳಿನಷ್ಟು ಅಸಂಖ್ಯಾತವಾಗಿರುವದು ಎಂದು ಆತನಿಗೆ ಹೇಳಲಾಯಿತು (ಆದಿಕಾಂಡ 13:16; 15:5; 32:12). ಕ್ರೈಸ್ತರು ಅಬ್ರಹಾಮನ ಆತ್ಮೀಕ ಸಂತತಿಯಾಗಿದ್ದಾರಾದ್ದರಿಂದ (ರೋಮಾ 4:11; ಗಲಾತ್ಯ 3:29), ಈ ಬಣ್ಣನೆಯು ವಿಶೇಷವಾಗಿ ಸೂಕ್ತವೆಂದೆಣಿಸುತ್ತದೆ.

ಆ ಮಹಾ ಸಮೂಹವು **ಎಲ್ಲಾ ಜನಾಂಗ ಮತ್ತು ಕುಲಗಳು ಹಾಗೂ ಭಾಷೆಗಳ ಜನರನ್ನು** ಒಳಗೊಂಡಿತ್ತು. ಇದಕ್ಕೆ ಮುಂಚೆ, ಕುರಿಯಾದಾತನನ್ನು ಈ ಮಾತುಗಳಿಂದ ಸ್ತುತಿಸಲಾಗಿತ್ತು, "ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ" (5:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಾಲ್ಕು ಪದಗಳನ್ನು ಬಳಸಿರುವದು ವಿಮೋಚಿಸಲ್ಪಟ್ಟವರು ಭೂಲೋಕದಲ್ಲೆಡೆಯಿಂದಲೂ ಬಂದವರಾಗಿದ್ದರು ಎಂಬ ವಿಚಾರವನ್ನು ಪುನರ್ದೃಡೀಕರಿಸುತ್ತದೆ; "ನಾಲ್ಕು" ಮಾನವ ಜನಾಂಗದ ಸಂಖ್ಯೆಯಾಗಿರುತ್ತದೆ. ರಕ್ಷಣೆ ಹೊಂದಿದವರು ಸಕಲ ಜನಾಂಗೀಯ ಹಿನ್ನಲೆಯಿಂದ ಬಂದವರಾಗಿದ್ದರು.

ಯೋಹಾನನು ಬಳಿಕ ಈ ಮಹಾ ಸಮೂಹವು **ದೇವರ ಮುಂದೆಯೂ ಕುರಿಯಾದಾತನ ಮುಂದೆಯೂ** ನಿಂತಿದ್ದರೆಂಬುದಾಗಿ ಬರೆಯುತ್ತಾನೆ. ಶೇಬಾ ದೇಶದ ರಾಣಿಯು ಸೊಲೊಮೋನನಿಗೆ ಹೀಗೆ ಹೇಳಿದಳು, "ನಿನ್ನ ಪ್ರಜೆಗಳು ಸದಾ ನಿನ್ನ ಮುಂದೆ ನಿಂತುಕೊಂಡು

ನಿನ್ನ ಜ್ಞಾನವಾಕ್ಯಗಳನ್ನು ಕೇಳುವ ನಿನ್ನ ಸೇವಕರೂ ಧನ್ಯರು" (1 ಅರಸು 10:8). ದೇವರು ಮತ್ತು ಯೇಸುವಿನ ಮುಂದೆ ನಿಂತಿರುವವರು ಇನ್ನೂ ಎಷ್ಟೋ ಧನ್ಯರಲ್ಲವೇ!

ದೇವರ ಸನ್ನಿಧಿಯಲ್ಲಿ ನಿಂತುಕೊಂಡಿದ್ದವರು **ಬಿಳಿ ನಿಲುವಂಗಿಗಳನ್ನು ತೊಟ್ಟಿದ್ದರು**. ಜಯಶಾಲಿಯಾಗುವವರಿಗೆ ಬಿಳೀ ನಿಲುವಂಗಿಗಳು ವಾಗ್ದಾನ ಮಾಡಲ್ಪಟ್ಟಿದ್ದವು (3:4, 5; ನೋಡಿರಿ 3:18). ಬಿಳೀ ನಿಲುವಂಗಿಗಳು "ಪರಲೋಕದ ಸಿಂಹಾಸನ ಕೋಣೆಯಲ್ಲಿ ಧರಿಸಿಕೊಳ್ಳಬೇಕಾಗಿದ್ದ 'ಆಸ್ಥಾನ ಉಡುಪು' ಆಗಿದ್ದವು"[17] (6:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು.** ಯೆಹೂದಿಗಳ ಮನಸ್ಸಿಗಾದರೋ, ಖರ್ಜೂರದ ಗರಿಗಳು ವಿಜಯ ಮತ್ತು ಸಂಭ್ರಮವನ್ನು ಸಂಕೇತಿಸುತ್ತಿದ್ದವು. ಖರ್ಜೂರದ ಗರಿಗಳು ಪರ್ಣಶಾಲೆಗಳ ಹಬ್ಬದಲ್ಲಿ ಬಳಸಲ್ಪಡುತ್ತಿದ್ದವು, ಅದೊಂದು ಸಂಭ್ರಮದ ಸಮಯವಾಗಿರುತ್ತಿತ್ತು (ಯಾಜಕಕಾಂಡ 23:34, 40; ನೋಡಿರಿ ಜೆಕರ್ಯ 14:16). ಬಳಿಕ, "Judas Maccabaeusನ ಕಾಲದಿಂದ ಆರಂಭಗೊಂಡು ಯೆಹೂದಿ ಹಬ್ಬಗಳಲ್ಲಿ [ಖರ್ಜೂರ ಗರಿಗಳು] ಅರಸನ ಎದುರುನೋಡುವಿಕೆಗೆ ಸೂಚನೆಯಾಗಿದ್ದವು."[18] ಯೇಸುವು ಜಯೋತ್ಸಾಹದೊಡನೆ ಯೆರೂಸಲೇಮ್ ಪಟ್ಟಣವನ್ನು ಪ್ರವೇಶಿಸುವ ವೇಳೆಯಲ್ಲಿ ಜನರು "ಖರ್ಜೂರದ ಗರಿಗಳನ್ನು ತಕ್ಕೊಂಡು ಆತನನ್ನು ಎದುರುಗೊಳ್ಳುವದಕ್ಕೆ ಹೊರಗೆ ಬಂದು - ಜಯ, ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ; ಇಸ್ರಾಯೇಲಿನ ಅರಸನಿಗೆ ಆಶೀರ್ವಾದ ಎಂದು ಆರ್ಭಟಿಸಿದರು" (ಯೋಹಾನ 12:13).

**ವಚನ 10.** ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದವರು ಹೀಗೆ ಸಂಭ್ರಮಿಸುತ್ತಿದ್ದರು: **ಅವರು - ಸಿಂಹಾಸನಾಸೀನನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ ಎಂದು ಮಹಾ ಶಬ್ದದಿಂದ ಕೂಗಿದರು. ನಮಗೆ ರಕ್ಷಣೆಯುಂಟಾದದ್ದಕ್ಕಾಗಿ** (ನಮ್ಮ ದೇವರಿಗೆ ರಕ್ಷಣೆ) ಎಂಬ ಪದಗುಚ್ಛದ ಅರ್ಥವು ದೇವರು ನಮ್ಮ ರಕ್ಷಣೆಯ ಮೂಲಾಧಾರನು ಎಂದಾಗಿರುತ್ತದೆ. RSV ತರ್ಜುಮೆಯು "ರಕ್ಷಣೆಯು ನಮ್ಮ ದೇವರಿಗೆ *ಸೇರಿದ್ದಾಗಿದೆ"* ಎಂದು ಹೇಳುತ್ತದೆ (ಒತ್ತಿ ಹೇಳಿದ್ದು ನನ್ನದು).

ಈ ವಾಕ್ಯಭಾಗದಲ್ಲಿ, **ರಕ್ಷಣೆ** ಎಂಬುದು ಪರಲೋಕದಲ್ಲಿನ ನಿತ್ಯಜೀವದ ಅಂತಿಮ ಸ್ಥಿತಿಯನ್ನು ಸೂಚಿಸುವದಾಗಿದೆ. "ರಕ್ಷಣೆ" ಎಂಬುದು ಗತಕಾಲದ ಪಾಪಗಳಿಂದ ರಕ್ಷಣೆ ಎಂದರ್ಥವನ್ನು ಸೂಚಿಸಬಹುದಾಗಿದೆ (ಮಾರ್ಕ 16:16), ದೇವರ ನಂಬಿಗಸ್ತ ಮಗುವು ಅನುಭವಿಸುವ ನಿರಂತರವಾಗಿ ಮುಂದುವರೆಯುವ ರಕ್ಷಣೆ (2 ಕೊರಿಂಥ 2:15; ನೋಡಿರಿ 1 ಯೋಹಾನ 1:7), ಅಥವಾ ನಿತ್ಯವಾಗಿ ರಕ್ಷಿಸಲ್ಪಡುತ್ತಿರುವದನ್ನು (ಈ ಸನ್ನಿವೇಶದಲ್ಲಿ ಕಾಣುವ ಪ್ರಕಾರವಾಗಿ) ಸೂಚಿಸಬಹುದಾಗಿದೆ. ಪೇತ್ರನು "ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗುವದಕ್ಕೆ ಸಿದ್ಧವಾಗಿರುವ ರಕ್ಷಣೆ" ಎಂದು ಕರೆಯುತ್ತಾನೆ (1 ಪೇತ್ರ 1:5).

"ರಕ್ಷಣೆ" ಎಂಬುದನ್ನು ಅನುವಾದಿಸಿರುವ σωτηρία (*sōtēria*) ಎಂಬ ಪದವು ಪರಿಪೂರ್ಣಗೊಳಿಸಲ್ಪಡುವದು, ಗುಣಪಡಿಸಲ್ಪಡುವದು ಮತ್ತು ಕೊನೆಗೂ ಸುರಕ್ಷಿತವಾಗಿರುವದು ಎಂಬ ಭಾವನೆಗಳನ್ನೊಳಗೊಂಡಿರುತ್ತದೆ. ಹೀಗಿರುವದರಿಂದ NEB ತರ್ಜುಮೆಯು ಈ ಪದವನ್ನು "ಜಯ" ಎಂದು ಅನುವಾದಿಸುತ್ತದೆ. ವಿಮೋಚಿಸಲ್ಪಟ್ಟವರು ಪಾಪದ ಮೇಲೆ, ತಮ್ಮ ಸಂಕಷ್ಟಗಳ ಮೇಲೆ, ಮತ್ತು ತಮ್ಮ ವೈರಿಗಳ ಮೇಲೆ ಜಯ ಹೊಂದಿದ್ದರು - ಆದ್ದರಿಂದ ಅವರು ಕರ್ತನನ್ನು ಸ್ತುತಿಸುತ್ತಾರೆ.

**ವಚನ 11.** ಶೀಘ್ರವೇ, ಸಿಂಹಾಸನ ಕೋಣೆಯಲ್ಲಿದ್ದ ಪ್ರತಿಯೊಬ್ಬರೂ ಸ್ತುತಿಸುವದಕ್ಕೆ

ಕೂಡಿಕೊಳ್ಳುತ್ತಾರೆ: **ಅಷ್ಟರಲ್ಲಿ ದೇವದೂತರೆಲ್ಲರೂ ಸಿಂಹಾಸನವು ಹಿರಿಯರು ನಾಲ್ಕು ಜೀವಿಗಳು ಸುತ್ತಲು ನಿಂತುಕೊಂಡಿದ್ದರು**. ಅವರು ಸಿಂಹಾಸನದ ಮುಂದೆ ಅಡ್ಡ ಬಿದ್ದು . . . ದೇವರನ್ನು ಆರಾಧಿಸಿದರು. 4ನೇ ಅಧ್ಯಾಯದಲ್ಲಿ ಪರಿಚಯಿಸಲ್ಪಟ್ಟ ಸಿಂಹಾಸನದ ದೃಶ್ಯವು ಇದೇ ಆಗಿರುತ್ತದೆ. "'ಒಬ್ಬ ಪಾಪಿಯು ದೇವರ ಕಡೆಗೆ ತಿರುಗಿಕೊಳ್ಳುವ ವಿಷಯದಲ್ಲಿ ದೇವದೂತರ ಮುಂದೆ ಸಂತೋಷ' ಆಗುವದಾದಲ್ಲಿ (ಲೂಕ 15:10), ವಿಮೋಚಿಸಲ್ಪಟ್ಟವರೆಲ್ಲರೂ ದೇವರ ಮುಂದೆ ನಿಂತುಕೊಂಡಾಗ ಪರಲೋಕದ ಸಮೂಹಗಳ ಸಂತೋಷಕರವಾದ ಆರಾಧನೆಯು ಇನ್ನೆಷ್ಟು ನಂಬಲಾಗದಷ್ಟು ದೊಡ್ಡದಾಗಿರಬಲ್ಲದು!"[19]

**ವಚನ 12**. ಈ ಪರಲೋಕ ಜೀವಿಗಳು ಹೀಗೆ ಕೂಗಿಕೊಂಡರು, **ಆಮೆನ್, ಸ್ತೋತ್ರವೂ ಪ್ರಭಾವವೂ ಜ್ಞಾನವೂ ಕೃತಜ್ಞತಾಸ್ತುತಿಯೂ ಮಾನವೂ ಬಲವೂ ಆಕ್ತಿಯೂ ನಮ್ಮ ದೇವರಿಗೆ ಯುಗಯುಗಾಂತರಗಳಲ್ಲಿಯೂ ಇರಲಿ. ಆಮೆನ್.** ಏಳು ವಿಧವಾದ ಸ್ತೋತ್ರವು ಎರಡು "ಆಮೆನ್‌ಗಳ" ಮಧ್ಯದಲ್ಲಿ ಸಿಲುಕಿಕೊಂಡಿರುತ್ತವೆ (3:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರಿಗೆ ಸಲ್ಲಿಸಲಾದ ಈ ಸ್ತೋತ್ರಾರ್ಪಣೆಯು ಕುರಿಯಾದಾತನಿಗೆ ಸಲ್ಲಿಸಿದ ಸ್ತೋತ್ರಾರ್ಪಣೆಯಂತೆಯೇ ಆಗಿರುತ್ತದೆ (5:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 5:12 ಮತ್ತು 7:12ರ ನಡುವೆ ಮೂರು ವ್ಯತ್ಯಾಸಗಳಿರುತ್ತವೆ: (1) ಪದಗಳ ಕ್ರಮವು ವ್ಯತ್ಯಾಸವಾಗಿರುತ್ತದೆ; (2) 7:12ರಲ್ಲಿ "ಕೃತಜ್ಞತಾಸ್ತುತಿ" ಬದಲಿಗೆ "ಐಶ್ವರ್ಯ" ಎಂದಿರುತ್ತದೆ; (3) ಮೂಲ ವಾಕ್ಯದಲ್ಲಿ, 7:12ನೇ ವಚನವು ಏಳು ಪದಗಳ ಮುಂದೆಯೂ ಒಂದು ನಿರ್ದಿಷ್ಟ ಗುಣವಾಚಿಯನ್ನು ("the") ಹೊಂದಿದ್ದರೆ, 5:12ನೇ ವಚನದಲ್ಲಿ ಹಾಗಿರುವದಿಲ್ಲ (4:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

## ಮಹಾ ಹಿಂಸೆಯನ್ನು ಅನುಭವಿಸಿ ಬಂದವರು (7:13-17)

**[13]ಇದನ್ನು ನೋಡಿ ಹಿರಿಯರಲ್ಲಿ ಒಬ್ಬನು - ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡಿರುವವರಾದ ಇವರು ಯಾರು? ಎಲ್ಲಿಂದ ಬಂದರು ಎಂದು ನನ್ನನ್ನು ಕೇಳಲು - ಅಯ್ಯಾ, ನೀನೇ ಬಲ್ಲೆ ಅಂದೆನು. [14]ಅವನು ನನಗೆ - ಇವರು ಆ ಮಹಾ ಹಿಂಸೆಯನ್ನು ಅನುಭವಿಸಿ ಬಂದವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತನ್ನ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ. [15]ಈ ಕಾರಣದಿಂದ ಅವರು ದೇವರ ಸಿಂಹಾಸನದ ಮುಂದೆ ಇದ್ದುಕೊಂಡು ಆತನ ಆಲಯದಲ್ಲಿ ಹಗಲಿರುಳು ಆತನ ಸೇವೆ ಮಾಡುತ್ತಾ ಇದ್ದಾರೆ; ಸಿಂಹಾಸನದಲ್ಲಿ ಕೂತಿರುವಾತನು ಗುಡಾರದಂತೆ ಅವರನ್ನು ಆವರಿಸುವನು. [16]ಇನ್ನು ಮೇಲೆ ಅವರಿಗೆ ಹಸಿವೆ ಇಲ್ಲ, ಬಾಯಾರಿಕೆ ಇಲ್ಲ; ಅವರಿಗೆ ಯಾವ ಬಿಸಿಲಾದರೂ ಯಾವ ಝಳವಾದರೂ ಬಡಿಯುವದಿಲ್ಲ; [17]ಸಿಂಹಾಸನದ ಮಧ್ಯದಲ್ಲಿರುವ ಯಜ್ಞದ ಕುರಿಯಾದಾತನು ಅವರಿಗೆ ಕುರುಬನಂತಿದ್ದು ಜೀವಜಲದ ಒರತೆಗಳ ಬಳಿಗೆ ನಡಿಸುತ್ತಾನೆ. ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು ಎಂದು ಹೇಳಿದನು.**

7:9–17ರಲ್ಲಿ ಸ್ತೋತ್ರಗಳು, ನಿಲುವಂಗಿಗಳು, ಮತ್ತು ಖರ್ಜೂರ ಗರಿಗಳು, ಹಾಗೂ ಇತರ ವಿವರಗಳು ವ್ಯಾಖ್ಯಾನಕಾರರನ್ನು ಈ ಎಲ್ಲಾ ಚಿತ್ರಣಗಳು "ಯೆಹೂದಿ ಹಬ್ಬಗಳಲ್ಲಿಯೇ ಅತ್ಯಂಥ ಸಂಭ್ರಮಕರವಾದ ಹಬ್ಬದಿಂದ ಆಯ್ದುಕೊಳ್ಳಲ್ಪಟ್ಟಿರುತ್ತವೆ"[20] – ಪರ್ಣಶಾಲೆಗಳ ಹಬ್ಬ – ಎಂಬ ಅಭಿಪ್ರಾಯಕ್ಕೆ ಬರುವಂತೆ ನಡಿಸುತ್ತವೆ. ಈ ಹಬ್ಬವು ಇಸ್ರಾಯೇಲ್ಯರು ಐಗುಪ್ತ್ಯದೇಶದಿಂದ ಕಾನಾನ್ ದೇಶಕ್ಕೆ ಮಾಡಿದ ಪ್ರಯಾಣವನ್ನು ಸ್ಮರಿಸುವದಾಗಿತ್ತು ಮತ್ತು ಸುಗ್ಗಿಯ ಕಾಲವು ಪೂರ್ಣಗೊಳ್ಳುವದನ್ನು ಕೊಂಡಾಡುವಿಕೆ ಸಹ ಆಗಿರುತ್ತಿತ್ತು. ಈ ವಾಕ್ಯಭಾಗದಲ್ಲಿರುವ

ಕೆಲವೊಂದು ವಿವರಗಳು ಆ ಹಬ್ಬದೊಂದಿಗೆ ಸಮಾನಾರ್ಥಗಳನ್ನು ಹೊಂದಿರುತ್ತದೆ:

*ನಿಲುವಂಗಿಗಳು.* ಪರ್ಣಶಾಲೆಗಳ ಹಬ್ಬದ ವೇಳೆ, ಜನರು ಹಬ್ಬದ ಉಡುಪುಗಳನ್ನು ಧರಿಸಿಕೊಂಡಿರುತ್ತಿದ್ದರು ಮತ್ತು ದೇವರಿಗೆ ಹಾಡುಗಳನ್ನು ಹಾಡಿ ಪ್ರಾರ್ಥನೆ ಮಾಡುತ್ತಿದ್ದರು.

*ಖರ್ಜೂರದ ಗರಿಗಳು.* ಯೆಹೂದ್ಯರಿಗೆ ಹೀಗೆ ಆಜ್ಞಾಪಿಸಲಾಗಿತ್ತು, "ಮೊದಲನೆಯ ದಿನದಲ್ಲಿ ಶ್ರೇಷ್ಠ ವೃಕ್ಷದ ಹಣ್ಣುಗಳನ್ನೂ ಖರ್ಜೂರ ಮರದ ಗರಿಗಳನ್ನೂ ಎಲೆಗಳು ದಟ್ಟವಾಗಿರುವ ಮರಗಳ ಕೊಂಬೆಗಳನ್ನೂ ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆಯುವ ನೀರವಂಜಿ ಚಿಗುರುಗಳನ್ನೂ ತೆಗೆದುಕೊಂಡು ಯೆಹೋವನ ಸನ್ನಿಧಿಯಲ್ಲಿ ಏಳು ದಿನಗಳು ಸಂಭ್ರಮವಾಗಿರಬೇಕು" (ಯಾಜಕಕಾಂಡ 23:40). ಹಬ್ಬದ ಸಂಭ್ರಮದುದ್ದಕ್ಕೂ, ಖರ್ಜೂರದ ಗರಿಗಳನ್ನು ಬೀಸುತ್ತಾ ತಮ್ಮ ಸಂಭ್ರಮವನ್ನು ವ್ಯಕ್ತಪಡಿಸುತ್ತಿದ್ದರು.

*ಸ್ತುತಿಗಳು.* ತನ್ನ ಜನರನ್ನು ಅರಣ್ಯದಲ್ಲೆಲ್ಲಾ ಸುರಕ್ಷಿತವಾಗಿ ಕರೆದುಕೊಂಡು ಬಂದದ್ದಕ್ಕಾಗಿ ದೇವರನ್ನು ಸ್ತುತಿಸಲಾಗುತ್ತಿತ್ತು.

*ಪರ್ಣಶಾಲೆಗಳು* (ಅಥವಾ ಗುಡಾರಗಳು). ಹಬ್ಬದ ವೇಳೆಯಲ್ಲಿ, ಯೆಹೂದ್ಯರು ತಮಗೆ ಅರಣ್ಯದಲ್ಲಿನ ಅಲೆದಾಟಗಳ ನೆನಪು ತಂದುಕೊಳ್ಳುವದಕ್ಕಾಗಿ ತಾತ್ಕಾಲಿಕವಾದ ಗುಡಾರಗಳಲ್ಲಿ ವಾಸಿಸುತ್ತಿದ್ದರು. ಆಶ್ರಯ ಅಥವಾ ಆಹಾರಗಳ ಕೊರತೆಯಿದ್ದವರನ್ನು ಬೇರೆಯವರು ತಮ್ಮ ಪರ್ಣಶಾಲೆಗಳೊಳಗೆ (ಗುಡಾರಗಳೊಳಗೆ) ಆಮಂತ್ರಿಸುತ್ತಿದ್ದರು. ಅದೇ ರೀತಿಯಲ್ಲಿ, ದೇವರು ವಿಮೋಚಿಸಲ್ಪಟ್ಟವರಿಗೆ ಅಗತ್ಯತೆಗಳನ್ನು ಸಂಧಿಸಿ ಕಾಪಾಡಲ್ಪಡುವ ಹಾಗೆ (ವ. 16) "ಗುಡಾರದಂತೆ ಅವರನ್ನು ಆವರಿಸಿಕೊಳ್ಳುವನು" (ವ. 15).

*ಜಲದ ಒರತೆಗಳ ಬಳಿಗೆ ನಡಿಸುವದು.* ಹಬ್ಬದ ಕಡೇ ದಿನವು "ಮಹಾದಿವಸ" ಎಂದು ಕರೆಯಲ್ಪಟ್ಟಿದೆ (ಯೋಹಾನ 7:2, 37). ಆ ದಿನದಂದು, ಸಂಭ್ರಮದಿಂದಿರುತ್ತಿದ್ದ ಆರಾಧಕರು ಯಾಜಕನ ಜೊತೆಯಾಗಿ ಸಿಲೋವ ಕೊಳಕ್ಕೆ ನಡೆದು ಸಾಗುತ್ತಿದ್ದರು, ಅಲ್ಲಿ ಧಾರ್ಮಿಕ ಆಚಾರಗಳಿಗಾಗಿ ನೀರನ್ನು ತೆಗೆದುಕೊಳ್ಳುತ್ತಿದ್ದರು. ಅದೇ ರೀತಿಯಲ್ಲಿಯೇ, ಕುರಿಯಾದಾತನು ವಿಮೋಚಿಸಲ್ಪಟ್ಟವರನ್ನು "ಜೀವಜಲದ ಒರತೆಗಳ ಬಳಿಗೆ ನಡಿಸುತ್ತಾನೆ" (ಪ್ರಕಟನೆ 7:17). "[ಪರ್ಣಶಾಲೆಗಳ] ಜಾತ್ರೆಯ ಮಹಾದಿವಸದ" ಜಲ ವೃತಾಚಾರಣೆಯ ವೇಳೆಯಲ್ಲಿ, ಯೇಸುವು "ಜೀವಕರವಾದ ನೀರಿನ" ಕುರಿತಾಗಿ ಮಾತಾಡಿದ್ದನು (ಯೋಹಾನ 7:38) ಮತ್ತು "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ" ಎಂದು ಕೂಗಿ ಹೇಳಿದ್ದನು (ಯೋಹಾನ 7:37).

ಬಹಳಷ್ಟು ಚಿತ್ರಣಗಳು ಪರ್ಣಶಾಲೆಗಳ ಹಬ್ಬದಿಂದ ಆಯ್ದುಕೊಳ್ಳಲಾಗಿದೆ ಎಂಬುದು ಖಚಿತವಾಗಿ *ಕಂಡು ಬರುತ್ತದೆ.* ಅದು ಹಾಗಿದ್ದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ, 7:9-17 ವಚನಗಳು ಸಂಭ್ರಮದಲ್ಲಿರುವ ಆರಾಧಕರ ಚಿತ್ರಣವನ್ನು ನೀಡುತ್ತದೆಂಬದಂತೂ ನಿಜವಾಗಿರುತ್ತದೆ. ಅವರು "ಮಹಾ ಹಿಂಸೆಯನ್ನು" ಅನುಭವಿಸಿ ಬಂದಿದ್ದರು, ಆದರೆ ಬಳಲಿ - ಬೆಂಡಾಗಿರಲಿಲ್ಲ ಮತ್ತು ಹೋರಾಡಿ ದಣಿದಿರುವವರು ಆಗಿರಲಿಲ್ಲ. ಅವರು ಲವಲವಿಕೆಯಿಂದಲೂ ಸಂಭ್ರಮದಿಂದಲೂ, ಮತ್ತು ವಿಜಯಿಶಾಲಿಗಳಾಗಿಯೂ ಇದ್ದರು.

ನಂಬಿಗಸ್ತರು ಪರಲೋಕದಲ್ಲಿ ಎಷ್ಟೊಂದು ಆಶೀರ್ವದಿಸಲ್ಪಟ್ಟವರಾಗಿ ಇರುತ್ತಾರೆಂಬುದನ್ನು ತೋರಿಸುವದಕ್ಕೆ, ಕರ್ತನು ಯೋಹಾನನ ಮೂಲಕ ಪ್ರಶ್ನೆ ಮತ್ತು ಉತ್ತರಗಳ ಗಳಿಗೆಯನ್ನು ಬರೆದಿಡುವಂತೆ ಮಾಡಿದನು. 13ರಿಂದ 17ರಲ್ಲಿನ ಪ್ರಶ್ನೆ ಮತ್ತು ಉತ್ತರಗಳ ವಿನಿಮಯವು ಪರಲೋಕದ ವಿಸ್ಮಯಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುವದಕ್ಕಾಗಿ ಒಂದು ನಾಟಕೀಯವಾದ ಸಾಧನವಾಗಿರುತ್ತದೆ; ಏನನ್ನಾದರೂ

“ಸಾಭಿತುಪಡಿಸುವದಕ್ಕಾಗಿ” ಇದನ್ನು ಒತ್ತಾಯಿಸಬಾರದು.

ಕೆಲವರು ಈ ದೃಶ್ಯವನ್ನು ಬಳಸಿಕೊಂಡು ಪ್ರಕಟನೆ ಪುಸ್ತಕವನ್ನು ಅಪೊಸ್ತಲನಾದ ಯೋಹಾನನು ಬರೆಯಲಿಲ್ಲ ಎಂದು ಸಾಭಿತುಪಡಿಸುವದಕ್ಕೆ ಪ್ರಯತ್ನಿಸುತ್ತಾರೆ; ಈ ಪುಸ್ತಕವನ್ನು ಬೇರೆ ಯಾವದಾದರೂ ಯೋಹಾನನು ಬರೆದಿರಬೇಕು ಯಾಕೆಂದರೆ ಅಪೊಸ್ತಲನಾದ ಯೋಹಾನನು ಆಗಿದ್ದರೆ ಆತನು ಸಮೂಹದಲ್ಲಿರುವ ಕೆಲವು ಜನರನ್ನಾದರೂ ಗುರುತಿಸುತ್ತಿದ್ದನು ಎಂಬುದಾಗಿ ವಾದಿಸುತ್ತಾರೆ. ಇನ್ನು ಕೆಲವರು ಈ ದೃಶ್ಯವನ್ನು ಬಳಸಿಕೊಂಡು ಆ ಸಮೂಹದೊಳಗೆ ಕ್ರೈಸ್ತರಿರಲಿಲ್ಲ ಎಂದು ಸಾಭಿತುಪಡಿಸುವದಕ್ಕೆ ಪ್ರಯತ್ನಿಸುತ್ತಾರೆ. ಈ ಸಮೂಹವು ಕ್ರೈಸ್ತರು ಆಗಿದ್ದಲ್ಲಿ, ಅಪೊಸ್ತಲನಾದ ಯೋಹಾನನು ಅವರ ಗುರುತು ಹಿಡಿದಿರುತ್ತಿದ್ದನು ಎಂಬುದಾಗಿ ಅವರು ವಾದ ಮಾಡುತ್ತಾರೆ. ಅಂಥ ವಾದಗಳು ಅಂತ್ಯಕಾಲಿಕ ಭಾಷೆಯಲ್ಲಿನ ಸಾಂಕೇತಿಕತೆ ಮತ್ತು ನಾಟಕೀಯ ಸ್ವಭಾವವನ್ನು ನಿರ್ಲಕ್ಷ್ಯಿಸುವವರಾಗಿದ್ದಾರೆ.

**ವಚನ 13. ಇದನ್ನು ನೋಡಿ ಹಿರಿಯರಲ್ಲಿ ಒಬ್ಬನು - ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡಿರುವವರಾದ ಇವರು ಯಾರು? ಎಲ್ಲಿಂದ ಬಂದರು? ಎಂದು ನನ್ನನ್ನು ಕೇಳಲು - ಅಯ್ಯಾ, ನೀನೇ ಬಲ್ಲೆ ಅಂದೆನು.** ಬಹುಶಃ, **ಹಿರಿಯರಲ್ಲಿ ಒಬ್ಬನು** ಯೋಹಾನನನ್ನು ಮಾತಾಡಿಸುವದರ ಕುರಿತ ವಿವರಣೆಯು ಇಲ್ಲಿ ಪ್ರಾಮುಖ್ಯವಾಗಿರುವದಿಲ್ಲ. ಇದು 5:5ರಲ್ಲಿ ಈ ಮುಂಚೆಯೂ ಸಂಭವಿಸಿರುತ್ತದೆ. ಪ್ರಕಟನೆಯ ನಾಟಕದಲ್ಲಿ, ವೇದಿಕೆಯ ಮೇಲಿರುವ ಯಾವದೇ ಪಾತ್ರದಾರಿಯು ದೃಶ್ಯಕ್ಕೆ ಅಗತ್ಯವಾಗಿದ್ದಲ್ಲಿ ಮಾತನ್ನಾಡುವ ಪಾತ್ರವನ್ನು ನಿರ್ವಹಿಸುವನು. ಈ ವಾಸ್ತವಾಂಶದಲ್ಲಿ ಮಹತ್ವವು ಇರುವದಾದರೆ, ರಕ್ಷಿಸಲ್ಪಟ್ಟವರನ್ನು ಪ್ರತಿನಿಧಿಸುವ ಹಿರಿಯರಿಗೆ ವಿಮೋಚನೆಯ ಕುರಿತು ಮಾತನಾಡುವ ಅರ್ಹತೆಯಿರುತ್ತದೆಂಬ ವಾಸ್ತವಾಂಶವೇ ಆಗಿರುತ್ತದೆ (4:4, 10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೋಹಾನನು ಪ್ರಶ್ನೆಯನ್ನು ಗಟ್ಟಿಯಾದ ಸ್ವರದಲ್ಲಿ ಕೇಳಿದನೆಂಬುದಾಗಿ ವಾಕ್ಯವು ತಿಳಿಸುವದಿಲ್ಲವಾದ್ದರಿಂದ, **ಅಂದೆನು** ಎಂಬ ಪದದ ಅರ್ಥವು ಹಿರಿಯನು ಯೋಹಾನನ ಮನಸ್ಸಿನಲ್ಲಿದ್ದ ಒಂದು ಪ್ರಶ್ನೆಗೆ ಅಥವಾ ಆತನ ಮುಖದಲ್ಲಿ ಕಾಣಿಸಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದನು, ಅಥವಾ ಹಿರಿಯನು ಒಂದು ಪ್ರಶ್ನೆಯನ್ನು ಎದುರುನೋಡುತ್ತಿದ್ದನು ಎಂದಾಗಿರುತ್ತದಷ್ಟೆ.

ಯೋಹಾನನಿಗೆ ಹಿರಿಯನು ಕೇಳಿದ ಪ್ರಶ್ನೆಗೆ ಉತ್ತರಿಸುವದಕ್ಕಾಗಲಿಲ್ಲ. ಯೋಹಾನನು ಅನುಭವಿಸಿರಬಹುದಾದ ಇಕ್ಕಟ್ಟಿನ ಸ್ಥಿತಿಯನ್ನು Albert Baldingerನು ಬಣ್ಣಿಸುತ್ತಾನೆ:

> ಮಹರ್ಷಿಯು ತನ್ನ ಕಣ್ಣುಗಳ ಮೇಲೆ ಕೈಯನ್ನು ಮುಚ್ಚಿ ನೋಡಿದಾಗ, ಬಿಳೀ ನಿಲುವಂಗಿಗಳನ್ನು ಗುರುತಿಸುವದಕ್ಕೆ ವಿಫಲನಾದನು. ಆತನು ಈ ಮುಂಚೆ ಎಂದೂ ಅಂಥದ್ದನ್ನು ಕಂಡಿರಲಿಲ್ಲ. ಆತನಿಗೆ ಶೋಕಾಚರಣೆಯ ಕಪ್ಪು ಉಡುಪುಗಳ ಪರಿಚಯವು ಅವನಿಗಿತ್ತು, ಪಾಪದ ಕೆಂಪು ಬಣ್ಣ, ರಾಜವಂಶಿಕ ನೇರಳೆ ಬಣ್ಣದ ಪರಿಚಯವಿತ್ತು; ಆತನು ಚಿನ್ನ ಮತ್ತು ಬೆಳ್ಳಿಯ ಪಟ್ಟಿಗಳನ್ನು ಮತ್ತು ಮುತ್ತುಗಳ ಆಭರಣಗಳನ್ನು ನೋಡಿದ್ದನು, ಅವುಗಳು ಮಹಾ ಪುರುಷರನ್ನು ಮರೆತು ಹೋಗಿದ್ದ ಸಮೂಹದವರಿಗಿಂತ ಭಿನ್ನಗೊಳಿಸಿದ್ದವು; ಆದರೆ ಇಲ್ಲೊಂದು ಭಿನ್ನತೆಯನ್ನು ಸೂಚಿಸುವ ಹೊಸದಾದ ಗುರುತು, ಒಂದು ನಿರ್ಮಲವಾದ ಬಿಳೀ ಬಣ್ಣದ ನಿಲುವಂಗಿ ಕಾಣಿಸಿತ್ತು, ಭೂಮಿಯ ಮೇಲೆ ಹಿಂದೆಂದೂ ಕಂಡಿರ ಒಂದು ಸ್ವರ್ಗೀಯ ತರಹದ್ದು ಆಗಿತ್ತು.[21]

ಯೋಹಾನನು ತನಗೆ ಗೊತ್ತಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾನೆ ಮತ್ತು ತನಗೆ ಮಾಹಿತಿಯು ಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದನು: **ಅಯ್ಯಾ, ನೀನೇ ಬಲ್ಲೆ. ಅಯ್ಯಾ** (ಒಡೆಯನೇ) ಎಂಬ

ಪದವನ್ನು ಅನುವಾದಿಸಿರುವ ಗ್ರೀಕ್ ಭಾಷೆಯ κύριος (*kurios*) ಎಂಬ ಪದವು ದೇವರು ಹಾಗೂ ಯೇಸುವಿಗಾಗಿ ಮೀಸಲಾಗಿರುವ ಗೌರವ ಸೂಚಕ ಪದವಾಗಿರುತ್ತದೆ, ಆದರೆ ಯಾವಾಗಲಾದರೊಮ್ಮೆ ಮನುಷ್ಯರಿಗೆ ಸಹ ಅನ್ವಯಿಸಲಾಗುತ್ತದೆ (ನೋಡಿರಿ ಮತ್ತಾಯ 18:25-34; 25:11; 1 ಪೇತ್ರ 3:6).

**ವಚನ 14.** ಹಿರಿಯನ ಉತ್ತರವು ನಿತ್ಯವಾಗಿ ರಕ್ಷಿಸಲ್ಪಟ್ಟವರು ಅನುಭವಿಸುವ ಆಶೀರ್ವಾದಗಳ ಕುರಿತಾದ ಒಂದು ಸಮಗ್ರವಾದ ಬಣ್ಣನೆಯನ್ನು ನೀಡುತ್ತದೆ. ಹಿರಿಯನು ಹೀಗೆ ಕೇಳಿದ್ದನು, "ಬಿಳಿ ನಿಲುವಂಗಿಗಳನ್ನು ತೊಟ್ಟುಕೊಂಡಿರುವವರಾದ ಇವರು ಯಾರು? ಎಲ್ಲಿಂದ ಬಂದರು." ಈಗ ಆತನು ತಾನೇ ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾನೆ: **ಇವರು ಆ ಮಹಾ ಹಿಂಸೆಯನ್ನು ಅನುಭವಿಸಿ ಬಂದವರು**. ಈ ಪದಗುಚ್ಛವನ್ನು "ಅದರೊಳಗಿಂದ ಹಾದು ಹೊರಗೆ ಬರುತ್ತಿರು*ವವರು*" ಎಂಬದಾಗಿ ಅನುವಾದಿಸಬಹುದಾಗಿದೆ, ಅದು ಬಹುಶಃ ಈ ದೃಶ್ಯವು ಅಂತಿಮ ನ್ಯಾಯತೀರ್ಪಿನ ದಿನಕ್ಕೆ ಮುಂಚೆ ಸಂಭವಿಸುತ್ತದೆಂಬುದನ್ನು ಸೂಚಿಸಬಹುದಾಗಿದೆ. ಇನ್ನೊಂದು ಕಡೆಯಲ್ಲಿ, ಈಗಾಲೇ ಸಂಭವಿಸಿರುವದನ್ನು ಕುರಿತು ಹೇಳುವದಕ್ಕೆ ವರ್ತಮಾನಕಾಲರೂಪವನ್ನು ಬಳಸುತ್ತಾ ಇಲ್ಲೊಂದು ರೂಪಕ ಭಾಷೆಯನ್ನು ಪ್ರಯೋಗಿಸಲಾಗಿರುತ್ತದೆಂದು ಅನೇಕರು ನಂಬುತ್ತಾರೆ. NIV ಮತ್ತು RSV ತರ್ಜುಮೆಗಳೆರಡೂ ಈ ಪದಗುಚ್ಛವನ್ನು "ಅದರೊಳಗಿಂದ ಹಾದು ಬಂದ*ವರು*" ಎಂದು ಅನುವಾದಿಸುತ್ತವೆ (ಒತ್ತಿ ಹೇಳಿದ್ದು ನನ್ನದು).

**ಮಹಾ ಹಿಂಸೆ** ಎಂಬ ಪದಗುಚ್ಛವು, ಕೆಲವರು ಊಹಿಸಿಕೊಳ್ಳುವ ಪ್ರಕಾರ, ಎರಡನೆಯ ಬರೋಣಕ್ಕೆ ಸ್ವಲ್ಪ ಕಾಲ ಮುಂಚೆ ಸಂಭವಿಸುವ ಏಳು-ವರ್ಷಗಳ ಕಾಲಾವಧಿಯನ್ನು ಸೂಚಿಸುವಂಥ ಒಂದು ತಾಂತ್ರಿಕ ಪದವಾಗಿರುವದಿಲ್ಲ. ಬಹಳಷ್ಟು ಸಹಸ್ರವರ್ಷಾಡಳಿತ ವಾದಿಗಳು ಹೊಂದಿರುವ ನಿಲುವು ಏನೆಂದರೆ ಕರ್ತನು ಹಿಂದಿರುಗಿ ಬಂದು ಅಕ್ಷರಶಃ ಸಾವಿರ-ವರ್ಷದ ಆಡಳಿತವನ್ನು ಆರಂಭಿಸುವ ಮುನ್ನ, ಏಳು ವರ್ಷಗಳ ಕಾಲವಿದ್ದು ಆ ವೇಳೆಯಲ್ಲಿ ಭೂಮಿಯ ಮೇಲೆ ಮಧ್ಯಾಕಾಶದಲ್ಲಿ ಹಾರಾಡುತ್ತಿರುವರು (ಅದು ಅವರು ಹೇಳುವ ಪ್ರಕಾರ "ಎತ್ತಲ್ಪಡುವಿಕೆ" ಮೂಲಕ ಆರಂಭಗೊಳ್ಳುತ್ತದೆ) ಮತ್ತು ಆ ವೇಳೆಯಲ್ಲಿ ಭೂಮಿಯ ಮೇಲೆ ಮಹಾ ಸಂಕಟವಿರುವದು "ಸಂಕಟಕಾಲ" ಎಂಬುದೆ. ಕ್ರೈಸ್ತರು ಯೋಹಾನನ ದಿನದಲ್ಲಿ ಅಲ್ಲ, ಆದರೆ ಭವಿಷ್ಯದಲ್ಲಿ ಸಾವಿರಾರು ವರ್ಷಗಳ ವೇಳೆ ಒಂದು ಸಂಕಟಕಾಲವನ್ನು ಅನುಭವಿಸಿ ಬದುಕಿ ಬರುವರೆಂಬ ವಿಚಾರವು ಯಾವದೇ ಸಾಂತ್ವನವನ್ನು ತಂದಿರುವದಕ್ಕೆ ಸಾಧ್ಯವಿರಲಿಲ್ಲ. ಸಭೆಯ ಆದಿ ಶತಮಾನಗಳಲ್ಲಿನ ಕ್ರೈಸ್ತರು "ಮಹಾ ಹಿಂಸೆ" ಎಂಬ ಪದಗುಚ್ಛವನ್ನು ಆಲಿಸಿದಾಗ, ಅದು ಅವರಿಗೆ ಒಂದೇ ಅರ್ಥವನ್ನು ಕೊಟ್ಟಿರಬಹುದಾಗಿದೆ: *ಅವರು* ಅನುಭವಿಸುತ್ತಿರುವ ಪರಿಶೋಧನೆಗಳು ಮತ್ತು ಸಂಕಟಗಳು.

ಪ್ರಕಟನೆ ಪುಸ್ತಕವು ಮೂಲ ವಾಚಕರ ತಕ್ಷಣದ ಕಾಲದಲ್ಲಿಯೇ ಒಂದು ಭಯಂಕರವಾದ ಪರೀಕ್ಷೆಯ ಸಮಯವು ಬರಲಿದೆ ಎಂಬುದನ್ನು ಮುಂತಿಳಿಸಿತ್ತು. ಸ್ಮುರ್ನದಲ್ಲಿನ ಸಭೆಗೆ ಹೀಗೆ ಹೇಳಲಾಗಿತ್ತು, "ಇಗೋ, ನೀವು ದುಷ್ಪ್ರೇರಣೆಗೆ ಒಳಗಾಗುವಂತೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವದಕ್ಕಿದ್ದಾನೆ; ಮತ್ತು ಹತ್ತು ದಿವಸಗಳ ತನಕ ನಿಮಗೆ *ಸಂಕಟ*ವಿರುವದು" (2:10; ಒತ್ತಿ ಹೇಳಿದ್ದು ನನ್ನದು). ಫಿಲದೆಲ್ಫಿಯದಲ್ಲಿನ ಕ್ರೈಸ್ತರಿಗೆ "ಲೋಕದ ಮೇಲೆಲ್ಲಾ ಬರುವದಕ್ಕಿರುವ ಶೋಧನೆಯ ಸಮಯ" ಕುರಿತು ಹೇಳಲಾಗಿತ್ತು (3:10). ಕೆಂಪು ಕುದುರೆಯ ಮೇಲಿನ ಸವಾರನಿಗೆ "ಭೂಮಿಯಿಂದ ಸಮಾಧಾನವನ್ನು ತೆಗೆದುಬಿಡುವದಕ್ಕೂ ಮನುಷ್ಯರು ಒಬ್ಬರನ್ನೊಬ್ಬರು ಕೊಲ್ಲುವವರಾಗುವಂತೆ ಮಾಡುವದಕ್ಕೂ ಅಧಿಕಾರವು

ಕೊಡಲ್ಪಟ್ಟಿತು" (6:4). ಯಜ್ಞವೇದಿಯ ಕೆಳಗಿದ್ದ ರಕ್ತಸಾಕ್ಷಿಗಳಿಗೆ "ನಿಮ್ಮ ಹಾಗೆ ಕೊಲೆಯಾಗಬೇಕಾಗಿರುವ ನಿಮ್ಮ ಸಹೋದರರ ಮತ್ತು ನಿಮ್ಮ ಜೊತೆದಾಸರ ಸಂಖ್ಯೆಯೂ ಪೂರ್ಣವಾಗುವ ತನಕ" ಎಂದು ಹೇಳಲಾಗಿತ್ತು (6:11). ಸನ್ನಿವೇಶದಲ್ಲಿ, "ಮಹಾ ಹಿಂಸೆ" ಎಂಬ ಪದವು ಹೆಚ್ಚುಕಡಿಮೆ ಖಚಿತವಾಗಿ ಕ್ರೈಸ್ತರು ರೋಮನ್ ಸರ್ಕಾರದಿಂದ ಅನುಭವಿಸುತ್ತಿದ್ದ ಹಿಂಸೆಯನ್ನು ಸೂಚಿಸುವದಾಗಿದೆ.

ಹೇಗೂ, ಯಾವದೇ ಕಾಲದ ಕ್ರೈಸ್ತರಿಗೆ ಅವರ ಸಮಯ ಮತ್ತು ಸ್ಥಳಕ್ಕೆ ವಿಶಿಷ್ಟವಾಗಿರುವ ಪರಿಶೋಧನೆಗಳು ಮತ್ತು ಸಂಕಟಗಳನ್ನು ಅನುಭವಿಸಿ ಬದುಕುಳಿಯುವ ಹಾಗೆ ದೇವರು ತನ್ನ ಜನರಿಗೆ ಸಹಾಯವನ್ನು ಒದಗಿಸುವವನಾಗಿದ್ದಾನೆಂಬ ಭರವಸವನ್ನು ಕೊಡುವದಕ್ಕಾಗಿ ಈ ವಾಕ್ಯಭಾಗವು ಸಂರಕ್ಷಿಸಿ ಇಡಲ್ಪಟ್ಟಿದೆ. θλίβω (*thlibō*) ಎಂಬ ಗ್ರೀಕ್ ಪದವು θλῖψις (*thlipsis*, "ಸಂಕಟ") ಎಂಬ ಕ್ರಿಯಾಪದಕ್ಕೆ ಸಂಬಂಧವನ್ನು ಹೊಂದಿರುವದಾಗಿದ್ದು, "ಒತ್ತು ಅಥವಾ ಸಂಕುಚಿಸು" ಎಂಬ ಅರ್ಥವನ್ನು ಕೊಡುತ್ತದೆ. ಅದು ಕೆಲವು ಸಾರಿ ಗೋಧಿ ಅಥವಾ ಜವೆಗೋಧಿಯನ್ನು ಒಂದು ಹಿಟ್ಟಿನಂಥ ಆಹಾರವಾಗುವಂತೆ ಒನೆಯುವ ಸನ್ನಿವೇಶಕ್ಕೆ ಅನ್ವಯಿಸಿ ಬಳಸಲಾಗುತ್ತಿತ್ತು.

> ಇಲ್ಲಿರುವ ಚಿತ್ರಣವು ಒಂದು ಮಣಿಯದ ತಳ ಹಾಗೂ ಒತ್ತುವ ಮೇಲ್ಭಾಗದ ನಡುವೆ ಒನೆಯುವ ಪ್ರಕ್ರಿಯೆಯೊಂದರ ಚಿತ್ರಣವಾಗಿರುತ್ತದೆ. ಕ್ರೈಸ್ತೀಯ ಜೀವಿತಕ್ಕೆ ಹೋಲಿಸುವದಾದರೆ, ಇದರರ್ಥವು ಕ್ರೈಸ್ತನು ತನ್ನ ನಂಬಿಕೆಯ ಮಣಿಯಲಾದ ನಿರುಂಕುಶ ಬೇಡಿಕೆಗಳ ಹಾಗೂ ರಾಜಿ ಮಾಡಿಕೊಳ್ಳುವಂತೆ ಲೋಕವು ಮುಂದಿಡುವ ಕಿರುಕುಳ ನೀಡುವ ಸವಾಲಿನ ನಡುವೆ ಜಜ್ಜಲ್ಪಡುತ್ತಾನೆ ಎಂಬುದೆ.[22]

ಈ ಪಾಪಭರಿತ ಲೋಕದ ಮಧ್ಯದಲ್ಲಿ ಒಂದು ನಂಬಿಗಸ್ತ ಜೀವಿತವನ್ನು ನಡಿಸುವದಕ್ಕೆ ಪ್ರಯತ್ನಿಸುವ ಪ್ರತಿಯೊಬ್ಬನಿಗೂ ಸಂಕಟವು ಒಂದು ಸಹಜವಾದ ಅನುಭವವಾಗಿರುತ್ತದೆ ಎಂಬುದನ್ನು ಬೈಬಲ್ ಸ್ಪಷ್ಟಗೊಳಿಸುತ್ತದೆ (ಕೊಲೊಸ್ಸೆ 1:24; 2 ತಿಮೊಥೆ 3:1-5). ಯೇಸು ತನ್ನ ಶಿಷ್ಯರಿಗೆ ಹೀಗೆ ಒತ್ತಿ ಹೇಳಿದ್ದನು, "ಲೋಕದಲ್ಲಿ ನಿಮಗೆ ಸಂಕಟ ಉಂಟು" (ಯೋಹಾನ 16:33), ಮತ್ತು ಪೌಲನು ಹೊಸದಾಗಿ ಕ್ರೈಸ್ತರಾದವರಿಗೆ "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕು" ಎಂದು ಎಚ್ಚರಿಸಿದನು (ಅಪೊಸ್ತಲರ ಕೃತ್ಯಗಳು 14:22). Edward McDowellನು ಈ "ಮಹಾ ಹಿಂಸೆ" ಎಂಬ ಪದಗುಚ್ಛವನ್ನು "ದೇವರ ಜನರ - ದೇವರ ಸಕಲ ಜನರ - ಭೂಲೋಕದ ಅನುಭವ"[23] ಕ್ಕೆ ಅನ್ವಯಿಸಬಹುದಾಗಿದೆ ಎಂಬ ಮುಕ್ತಾಯಕ್ಕೆ ಬರುತ್ತಾನೆ.

ಚರ್ಚೆಯಲ್ಲಿರುವ ವಾಕ್ಯಭಾಗವು ತಿಳಿಸಲಿಚ್ಛಿಸುವ ಸಂಗತಿಯು ಏನೆಂದರೆ ಪರಲೋಕದಲ್ಲಿದ್ದ ದೇವಜನರು *ಬದುಕುಳಿದು* ಬಂದಿದ್ದರು. ಎಂಬುದೆ. ಸಂಕಟವು ಎಷ್ಟೇ ಭಯಂಕರವಾಗಿದ್ದರೂ ಸರಿಯೇ, ಅದು ಎಂದಿಗೂ ಸದಾಕಾಲವೂ ಉಳಿಯುವಂಥದ್ದಲ್ಲ.

ಬಳಿಕ ಹಿರಿಯನು ಮಹಾ ಸಮೂಹವು ಧರಿಸಿಕೊಂಡಿದ್ದ ಬಿಳಿ ನಿಲುವಂಗಿಯ ಮಹತ್ವವನ್ನು ವಿವರಿಸುತ್ತಾನೆ: **ಯಜ್ಞದ ಕುರಿಯದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ. ರಕ್ತದಲ್ಲಿ . . . ತೊಳೆದು** ಎಂಬ ಪದಗುಚ್ಛವು ಎಷ್ಟೊಂದು ಚಿರಪರಿಚಿತವಾಗಿರುತ್ತದೆಂದರೆ ಕೆಲವರು ಒಂದು ಮನಸೆಳೆಯುವ ಚಿತ್ರಣವನ್ನು ತಪ್ಪಿಸಿಕೊಳ್ಳುತ್ತಾರೆ. ಪಾಪಭರಿತ ಜೀವಿತವೊಂದನ್ನು ಒಂದು ಹೊಲೆಯಾದ ಬಟ್ಟೆಗೆ ಹೋಲಿಕೆ ಮಾಡುವದು ಬಹಳ ಸಾಮಾನ್ಯವಾಗಿರುತ್ತದೆ (ಯೆಶಾಯ 64:6; ಜೆಕರ್ಯ 3:3-5), ಆದರೆ ಪ್ರಕಟನೆ 7:14ರಲ್ಲಿ ಹೊಲೆಯಾದ ಬಟ್ಟೆಯನ್ನು *ಬಿಳೀಯಾಗಿ* ಮಾಡುವದಕ್ಕಾಗಿ *ಕೆಂಪು* ರಕ್ತದಲ್ಲಿ

ತೊಳೆಯಲಾಗಿತ್ತು. S. D. Gordonನು ಹೀಗೆ ಬರೆಯುತ್ತಾನೆ, "ಎಂಥ ಒಬ್ಬ ರಸಾಯನಶಾಸ್ತ್ರಜ್ಞ ಮತ್ತು ಒಬ್ಬ ಕಲಾಕಾರನು ಈ ಯೇಸು! ಆತನು ಕಡು ಕಪ್ಪು ಬಣ್ಣದ್ದನ್ನು ಶುಭ್ರ ಬಿಳೀ ಬಣ್ಣಕ್ಕೆ ಮಾರ್ಪಡಿಸುವದಕ್ಕಾಗಿ ಹೊಳೆಯುವ ಕೆಂಪು ಬಣ್ಣವನ್ನು ಬಳಸುತ್ತಾನೆ."[24]

ಸಿಂಹಾಸನದ ಸುತ್ತಲು ಇದ್ದವರು ಈ ಶುದ್ಧೀಕರಿಸುವಿಕೆಯಲ್ಲಿ ನಿಷ್ಕ್ರಿಯರಾಗಿದ್ದರು: *ಅವರು* "ತಮ್ಮ ನಿಲುವಂಗಿಗಳನ್ನು ತೊಳೆದು" ಕೊಂಡಿದ್ದರು; *ಅವರು* ಅವುಗಳನ್ನು "ರಕ್ತದಲ್ಲಿ . . . ಶುಭ್ರಮಾಡಿದ್ದಾರೆ." ಬೋಧಕನಾದ ಅನನೀಯನು ಪೌಲನಿಗೆ ಹೀಗೆ ಹೇಳಿದನು, "ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16). ನಮ್ಮಂತಹ ಪಶ್ಚಾತ್ತಾಪವುಳ್ಳ ವಿಶ್ವಾಸಿಗಳು ದೀಕ್ಷಾಸ್ನಾನದ ನೀರಿನಲ್ಲಿ ಮುಳುಗಿಸಲ್ಪಟ್ಟ ವೇಳೆ, ನಮ್ಮ ಆತ್ಮಗಳು ಕುರಿಯಾದಾತನ ರಕ್ತದಲ್ಲಿ ತೊಳೆಯಲ್ಪಟ್ಟು ಶುಭ್ರಗೊಂಡವು. ಬಳಿಕ, ನಾವು ಕ್ರೈಸ್ತರಾಗಿ ದೇವರ ವಾಕ್ಯದ ಬೆಳಕಿನಲ್ಲಿ ನಡೆದಂತೆ (ನೋಡಿರಿ ಕೀರ್ತನೆ 119:105), ನಮ್ಮನ್ನು ನಮ್ಮ ಪಾಪಗಳಿಂದ ಶುದ್ಧ ಮಾಡಿ ತೊಳೆಯುವ ಕೆಲಸವನ್ನು ರಕ್ತವು ಮುಂದುವರೆಸುತ್ತದೆ (1 ಯೋಹಾನ 1:7). "ಯಜ್ಞದ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತ"ಕ್ಕಾಗಿ ದೇವರಿಗೆ ಸ್ತೋತ್ರ (1 ಪೇತ್ರ 1:19)!

**ವಚನ 15.** ನಂತರ, ಹಿರಿಯನು ಹೀಗೆ ಹೇಳುತ್ತಾನೆ, **ಈ ಕಾರಣದಿಂದ ಅವರು ದೇವರ ಸಿಂಹಾಸನದ ಮುಂದೆ ಇದ್ದುಕೊಂಡು ಆತನ ಆಲಯದಲ್ಲಿ ಹಗಲಿರುಳು ಆತನ ಸೇವೆ ಮಾಡುತ್ತಾ** ಇದ್ದಾರೆ. ಪರಲೋಕವನ್ನು ಒಂದು ಸೋಮಾರಿತನದ ಸ್ಥಳವೆಂಬುದಾಗಿ ಬಣ್ಣಿಸಲಾಗಿರುತ್ತದೆ, ಉಬ್ಬಿಕೊಂಡಿರುವ ಮೇಘಗಳ ಮೇಲೆ ಜನರು ನಿತ್ಯನಿತ್ಯವಾದ ಕಾಲಕ್ಕೂ ಕೈಗಳನ್ನು ಮುಗಿದುಕೊಂಡು ಹಿಟ್ಟಿನಂತಹ ಬಿಳೀ ನಿಲುವಂಗಿಗಳನ್ನು ಧರಿಸಿ ಕೂತುಕೊಂಡಿರುತ್ತಾರೆಂಬಂತೆ ಬಿಂಬಿಸಲಾಗಿರುತ್ತದೆ. ಅಂಥ ಒಂದು ಅಸ್ತಿತ್ವವು ಬೇಸರ ಹಿಡಿಸುವಂಥದ್ದಾಗಿರುವದು. ಪರಲೋಕವು ಚಟುವಟಿಕೆಗಳಿಂದ ಸ್ಥಳವಾಗಿರುವದು ಎಂಬುದನ್ನು - ಕ್ರೈಸ್ತರು ಆತನನ್ನು ಆರಾಧಿಸಿ ಸೇವೆ ಮಾಡುವ ಸ್ಥಳವೆಂಬುದನ್ನು - ಅರಿತುಕೊಳ್ಳಬೇಕೆಂದು ದೇವರು ಬಯಸುತ್ತಾನೆ (ನೋಡಿರಿ 22:3). NASBಯಲ್ಲಿ **ಸೇವೆ ಮಾಡುತ್ತಾ** ಎಂಬುದನ್ನು ಅನುವಾದಿಸಿರುವ λατρεύω (*latreuō*) ಎಂಬ ಪದವು "ಆರಾಧನೆ" ಎಂಬುದಕ್ಕೆ ಬಳಸಲ್ಪಡುವ ಪದವಾಗಿದೆ, ವಿಶೇಷವಾಗಿ ಸಾರ್ವಜನಿಕ ಆರಾಧನೆ. ಅಲ್ಲದೆ ಇದು ಒಬ್ಬನು ತನ್ನನ್ನು ದೇವರ ಸೇವೆಗಾಗಿ ಸಮರ್ಪಿಸಿಕೊಳ್ಳುವದನ್ನು ಸಹ ಸೂಚಿಸುತ್ತದೆ. ಈ ಪದವು ರೋಮಾ 12:1ರಲ್ಲಿ ಒಬ್ಬನು ತನ್ನ ದೇಹವನ್ನು ಒಂದು ಸಜೀವ ಯಜ್ಞವಾಗಿ ಅರ್ಪಿಸುವದನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ.

ಕೆಲವರು 7:15ನೇ ವಚನವು **ಹಗಲಿರುಳು** ಕುರಿತು ಮಾತಾಡಿದರೆ, 21:25ನೇ ವಚನವು "ರಾತ್ರಿಯಂತೂ ಅಲ್ಲಿಲ್ಲ" ಎಂದು ಹೇಳುತ್ತದೆ ಎಂಬುದರ ವಿಷಯದಲ್ಲಿ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ. ಹೇಗೂ, ಪ್ರಕಟನೆ ಪುಸ್ತಕದಲ್ಲಿ ಸಾಮಂಜಸ್ಯತೆಗಿಂತಲೂ ಚಿತ್ರಣವು ಬಹಳ ಪ್ರಾಮುಖ್ಯವಾಗಿರುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. "ಹಗಲಿರುಳು" ಎಂಬುದು "ಎಡೆಬಿಡದೆ ಎಲ್ಲಾ ಸಮಯಗಳಲ್ಲಿಯೂ" ಎಂಬುದನ್ನು ಹೇಳುವದಕ್ಕೆ ಬಳಸುವ ನುಡಿಗಟ್ಟಿನ ರೀತಿಯಾಗಿರುತ್ತದೆ. ಅದೇ ರೀತಿಯಲ್ಲಿಯೇ, ಕೆಲವರು 7:15ರಲ್ಲಿ **ಆಲಯ** ಎಂದೂ, 21:22ರಲ್ಲಿ "ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ" ಎಂಬುದರ ವಿಷಯದಲ್ಲಿ ಕಳಕಳಿಯನ್ನು ಹೊಂದಿರುತ್ತಾರೆ. ಪರಲೋಕದಲ್ಲಿ ದೇವಾಲಯ ಎಂದು ಕರೆಯಲ್ಪಡುವ ಯಾವ *ಕಟ್ಟಡ* ಸಹ ಇರುವದಿಲ್ಲ; ಬದಲಾಗಿ, *ಇಡೀ* ಪರಲೋಕವು ದೇವರ ಪವಿತ್ರಸ್ಥಳ (ದೇವಾಲಯ) ಆಗಿರುವದು,

ಅದು ಆತನು ಆರಾಧಿಸಲ್ಪಡುವ ಸ್ಥಳವಾಗಿರುತ್ತದೆ.

ಈ ಹಿರಿಯನು ಇನ್ನು ಮುಂದಕ್ಕೆ ವಿವರಿಸುವದೇನೆಂದರೆ, **ಸಿಂಹಾಸನದಲ್ಲಿ ಕೂತಿರುವಾತನು ಗುಡಾರದಂತೆ ಅವರನ್ನು ಆವರಿಸುವನು**. KJVಯಲ್ಲಿ "ಆತನು ಅವರ ಮಧ್ಯದಲ್ಲಿ ವಾಸಿಸುವನು" ಎಂದಿರುತ್ತದೆ. ದೇವರು ಪರಲೋಕದಲ್ಲಿ ತನ್ನ ಜನರ ಮಧ್ಯದಲ್ಲಿ ವಾಸಿಸುವನು, ಆದರೆ ಈ ಸನ್ನಿವೇಶದಲ್ಲಿ ಹೆಚ್ಚಿನ ಸೂಚ್ಯಾರ್ಥವು ಇರಬಹುದಾಗಿದೆ. ಮೂಲ ವಾಕ್ಯವು ಆತನು "ತನ್ನ ಗುಡಾರವನ್ನು ಅವರ ಮೇಲೆ ವಿಸ್ತರಿಸುವನು" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ. ದೇವರು ತನ್ನ ಗುಡಾರವನ್ನು ತನ್ನ ಮೇಲೆ ವಿಸ್ತರಿಸುವದರ ಚಿತ್ರಣವು ಆತನು ಅವರನ್ನು ಕಾಪಾಡುವನು ಮತ್ತು ಪೋಷಿಸುವನು ಎಂಬ ಸೂಚ್ಯಾರ್ಥವನ್ನು ನೀಡುತ್ತದೆ. RSVಯು ಹೀಗೆ ಹೇಳುತ್ತದೆ, "ತನ್ನ ಪ್ರಸನ್ನತೆಯಿಂದ ಅವರಿಗೆ ಆಶ್ರಯವಾಗುವನು."

**ವಚನಗಳು 16, 17.** ಬಳಿಕ ಹಿರಿಯನು ಅದರ ಫಲಿತದ ಬಗ್ಗೆ ಹೇಳುತ್ತಾನೆ: **ಇನ್ನು ಮೇಲೆ ಅವರಿಗೆ ಹಸಿವೆ ಇಲ್ಲ, ಬಾಯಾರಿಕೆ ಇಲ್ಲ; ಅವರಿಗೆ ಬಿಸಿಲಾದರೂ ಯಾವ ಝಳವಾದರೂ ಬಡಿಯುವದಿಲ್ಲ.** ಇಲ್ಲಿ ನಾವು "ಮನುಷ್ಯನ ಆತ್ಮೀಕ ಹಂಬಲಗಳಿಗೆ ಅಂತಿಮ ಸಂತೃಪ್ತಿ"[25] ಆಗುವದನ್ನು ಕಾಣುತ್ತೇವೆ. ಜೀವನದ ಹೋರಾಟಗಳು ಮುಗಿದು ಹೋಗುತ್ತವೆ!

**ಸಿಂಹಾಸನದ ಮಧ್ಯದಲ್ಲಿರುವ ಕುರಿಯಾದಾತನು ಅವರಿಗೆ ಕುರುಬನಂತಿರುವನು**. KJVಯಲ್ಲಿ "ಅವರನ್ನು ಮೇಯಿಸುವನು" ಎಂದಿರುತ್ತದೆ, ಆದರೆ ποιμαίνω (*poimainō*) ಎಂಬ ಗ್ರೀಕ್ ಕ್ರಿಯಾಪದದ ಅರ್ಥವು "ಕುರುಬನಾಗಿ ಪೋಷಿಸುವದು" ಎಂದಾಗಿರುತ್ತದೆ. ಈ ಕೆಲಸದಲ್ಲಿ ಮೇಯಿಸುವದು ಸೇರಿರುತ್ತದೆ, ಆದರೆ ಅದರಲ್ಲಿ ಅದಕ್ಕಿಂತಲೂ ಹೆಚ್ಚಿನದ್ದು ಸೇರಿರುತ್ತದೆ (ನೋಡಿರಿ ಯೋಹಾನ 10:11). ಒಬ್ಬ ಕುರಿಯದಾತನು ಕುರುಬನ ಪಾತ್ರವನ್ನು ವಹಿಸಿಕೊಳ್ಳುವ ಸಂಕೇತವು ನಮಗೆ ವಿಚಿತ್ರವೆಂದು ಕಾಣಿಸಬಹುದು, ಆದರೆ ಒಂದು ಕುರಿಯ ಅಗತ್ಯತೆಯನ್ನು ಮತ್ತೊಂದು ಕುರಿಯು ಉತ್ತಮವಾಗಿ ಅರ್ಥಮಾಡಿಕೊಳ್ಳುವದಕ್ಕಿಂತಲೂ ಅಧಿಕವಾಗಿ ಬೇರೆ ಇನ್ನಾರು ಅರ್ಥಮಾಡಿಕೊಳ್ಳಬಲ್ಲರು? ಕುರಿಯಾದಾತನೊಬ್ಬನು ಕುರಿಮಂದೆಯನ್ನು ನಡಿಸುವದು ಆದಿ ವಾಚಕರಿಗೆ ವಿಚಿತ್ರವಾಗಿ ತೋರಿರಲಾರದು. ಬಹಳಷ್ಟು ಮಂದೆಗೆ ಒಂದು "ನಡಿಸುವ ಕುರಿ" ಇರುತ್ತಿತ್ತು.

ಕುರುಬನಾಗಿ, ಯೇಸು ತನ್ನ ಜನರಿಗೆ ಮಾಡುವ ಒಂದು ಕೆಲಸವು ಎಂದರೆ ಅವರನ್ನು **ಜೀವಜಲದ ಒರತೆಗಳ ಬಳಿಗೆ ನಡಿಸುತ್ತಾನೆ** "ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯು . . . ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು" ಬರುತ್ತಿತ್ತು (22:1). 16 ಮತ್ತು 17 ವಚನಗಳಲ್ಲಿ ಪರಿಭಾಷೆಯು ಯೆಶಾಯ 49:10ರಲ್ಲಿ ವಿಚಾರವನ್ನು ಪ್ರತಿಧ್ವನಿಸುತ್ತದೆ, ಅದು ಯೆಹೂದಿ ಸೆರೆಯಾಳುಗಳು ತಮ್ಮ ಸ್ವದೇಶಕ್ಕೆ ಮರಳಿ ಬರುವದನ್ನು ಚಿತ್ರಿಸುತ್ತದೆ: "ಅವರಿಗೆ ಹಸಿವೆ ಬಾಯಾರಿಕೆಗಳು ಆಗವು. ಝಳವೂ ಬಿಸಿಲೂ ಬಡಿಯವು; ಅವರನ್ನು ಕರುಣಿಸುವಾತನು ದಾರಿತೋರಿಸುತ್ತಾ ನೀರುಕ್ಕುವ ಒರತೆಗಳ ಬಳಿಯಲ್ಲಿ ನಡಿಸುವನು." ಒಳ್ಳೇ ಕುರುಬನು ತನ್ನ ಜನರಿಗಾಗಿ ಮಾಡುವ ಮತ್ತು ಮಾಡಲಿರುವ ಕಾರ್ಯಗಳಿಗಾಗಿ ಕೀರ್ತನೆ 23; ಯೆಶಾಯ 40:11; ಯೋಹಾನ 10:1-18 ನೋಡಿರಿ.

Earl Palmeನು ಇದನ್ನು ಆದರಣೆಕರವಾಗಿ ಕಾಣುತ್ತಾನೆ, ಏನೆಂದರೆ

> . . . ಇಂದು ನನ್ನ ದೈನಂದಿನ ನಡೆಯ ಕರ್ತನು ಮುಂದೊಂದು ದಿನ ನನ್ನ ಪ್ರಯಾಣದ ಅಂತ್ಯದಲ್ಲಿ ಸಂಧಿಸಲಿರುವ ಅದೇ ಕರ್ತನಾಗಿರುತ್ತಾನೆ. . . . ಎಲ್ಲಾ ಮಾನವರ ಇತಿಹಾಸದ ಗಡಿರೇಖೆಯಲ್ಲಿ ನಿಲ್ಲುವವನು ಒಬ್ಬ ಅಪರಿಚಿತ ವ್ಯಕ್ತಿಯಲ್ಲ ಆದರೆ ಗಲಿಲಾಯ ಮತ್ತು

ಯೋರ್ದಾನ್ ಹಾಗೂ ಯೆರೂಸಲೇಮಿನ ಹತ್ತಿರ ಕಠೋರವಾದ ಬೆಟ್ಟದ ಮೇಲೆ ನಿಂತಿದ್ದ ಅದೇ ಕರ್ತನಾದ ಯೇಸು ಕ್ರಿಸ್ತನೇ ಆಗಿರುವನು.[26]

Corrie ten Boomಳ ತಂದೆಯು ಆಕೆಗೆ ಹೀಗೆ ಹೇಳಿದನು, "ಯೇಸುವು ನಿನ್ನ ಕೈಯನ್ನು ಹಿಡಿದುಕೊಳ್ಳುವಾಗ ಆತನು ನಿನ್ನನ್ನು ಬಿಗಿಯಾಗಿ ಕಾಯುತ್ತಾನೆ. ಯೇಸು ನಿನ್ನನ್ನು ಬಿಗಿಯಾಗಿ ಕಾಯುವ ವೇಳೆ ಆತನು ನಿನ್ನನ್ನು ಜೀವಿತದ ಮೂಲಕ ನಡಿಸುತ್ತಾನೆ. ಯೇಸು ನಿನ್ನನ್ನು ಜೀವಿತದ ಮೂಲಕ ನಡಿಸುವಾಗ ಆತನು ನಿನ್ನನ್ನು ಸುರಕ್ಷಿತವಾಗಿ ಮನೆಗೆ ಸೇರಿಸುತ್ತಾನೆ."[27]

ಹಿರಿಯನು "ಇಡೀ ಬೈಬಲಿನಲ್ಲಿಯೇ ಅತ್ಯಂಥ ಕೋಮಲವಾದ ವಾಕ್ಯದೊಂದಿಗೆ"[28] ಮುಕ್ತಾಯಗೊಳಿಸುತ್ತಾನೆ: **ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು** (21:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ದುಃಖದ ಪ್ರತಿಯೊಂದು ಕಣ್ಣೀರನ್ನು, ನಷ್ಟದ ಪ್ರತಿಯೊಂದು ಕಣ್ಣೀರನ್ನು, ನಿರಾಶೆಯ ಪ್ರತಿಯೊಂದು ಕಣ್ಣೀರನ್ನು, ನೋವಿನ ಪ್ರತಿಯೊಂದು ಕಣ್ಣೀರನ್ನು ಒರಸಿ ಬಿಡುವನು (ನೋಡಿರಿ ಯೆಶಾಯ 25:8; 66:13). ಕವಿಯಾಗಿರುವ Robert Burnsನು ಈ "ಮುಕ್ತಾಯದ ವಚನಗಳನ್ನು ಓದಿ ಕಣ್ಣೀರು ಬಿಡದೆ ಇರುವದಕ್ಕಾಗಲಿಲ್ಲ"[29] ಎಂದು ಹೇಳಲಾಗುತ್ತದೆ. William Barclayನು ಹೀಗೆ ಬರೆದನು, "ಶೋಕದ ಮನೆಯಲ್ಲಿ ಮತ್ತು ಮರಣ ಗಳಿಗೆಯಲ್ಲಿ ಈ ವಾಕ್ಯಭಾಗದಿಂದ ಸಾಂತ್ವನವನ್ನು ಪಡೆದುಕೊಂಡ ಜನರನ್ನು ಎಣಿಸುವದು ಅಸಾಧ್ಯವಾಗಿರುತ್ತದೆ."[30]

## ಅನ್ವಯಿಸುವಿಕೆ

### ದೇವರ ಭದ್ರತೆ (ಅಧ್ಯಾಯ 7)

7ನೇ ಅಧ್ಯಾಯಕ್ಕೆ ಕೊಡಬಹುದಾದ ಸಂಭಾವ್ಯ ಶಿರ್ಷಿಕೆಗಳಲ್ಲಿ ಸೇರಿದವುಗಳೆಂದರೆ, "ಇಲ್ಲಿಂದ ನಿತ್ಯತ್ವದ ಕಡೆಗೆ," "ಇದೆಲ್ಲಾ ಮತ್ತು ಪರಲೋಕ ಸಹ," ಮತ್ತು "ಮುಂಚೆ ಮತ್ತು ತರುವಾಯ." ಬಯಸುವದಾದರೆ, ನೀವು 6 ಮತ್ತು 7 ಅಧ್ಯಾಯಗಳನ್ನು ಒಂದೇ ಒಂದು ಪಾಠದಲ್ಲಿ ನೀವು ಮುಗಿಸಬಹುದು. ಇವೆರಡನ್ನೂ ಒಟ್ಟಾಗಿ ಜೋಡಿಸುವಂಥ ಪ್ರಧಾನ ಚರ್ಚೆಯಾಂಶವೆಂದರೆ "ದೇವರ ಚಿತ್ತ." ಈ ಎರಡೂ ಅಧ್ಯಾಯಗಳಲ್ಲೆಲ್ಲಾ ದೇವರ ಚಿತ್ತವು ಹೇಗೆ ಒತ್ತಿ ಹೇಳಲ್ಪಟ್ಟಿದೆ ಎಂಬುದನ್ನು ಗಮನಕ್ಕೆ ತರಬಹುದು. ಸಂಭಾವ್ಯ ಉಪ-ಅಂಶಗಳೆಂದರೆ (1) ದೇವರ ಚಿತ್ತ ಮತ್ತು ಹಿಂಸೆ (6:1-11), (2) ದೇವರ ಚಿತ್ತ ಮತ್ತು ದಂಡನೆ (6:12-17), (3) ದೇವರ ಚಿತ್ತ ಮತ್ತು ಭದ್ರತೆ (7:1-8), ಮತ್ತು (4) ದೇವರ ಚಿತ್ತ ಮತ್ತು ಸ್ತೋತ್ರಗಳು (7:9-17). Wiersbeನು "ಮುದ್ರೆಗಳು ಮತ್ತು ಮುದ್ರೆ ಹಾಕಲ್ಪಟ್ಟವರು"[31] ಎಂಬ ಪಾಠದಡಿಯಲ್ಲಿ 6 ಮತ್ತು 7 ಅಧ್ಯಾಯಗಳನ್ನು ಸೇರ್ಪಡೆಗೊಳಿಸುತ್ತಾನೆ, ಅದರಲ್ಲಿ (1) ಪ್ರತಿದಂಡನೆ (6:1-8), (2) ಪ್ರತ್ಯುತ್ತರ (6:9-17), ಮತ್ತು ವಿಮೋಚನೆ (7:1-17) ಮೇಲೆ ಗಮನ ಹರಿಸುತ್ತಾನೆ.

### ಮನೋಭಾವ (ಅಧ್ಯಾಯ 7)

ದೇವರು ತನ್ನ ಜನರ ಪರವಾಗಿ ವೈಯಕ್ತಿಕವಾಗಿಯೂ ಸಕ್ರಿಯವಾಗಿಯೂ ಮಧ್ಯಪ್ರವೇಶಿಸುವ ವಾಗ್ದಾನ ಮಾಡಿದ್ದಾನೆ. ಆತನು ನಮಗೆ ಇನ್ನಷ್ಟು ಆಂತರ್ಯದ ಬಲವನ್ನು ಕೊಡುವ ವಾಗ್ದಾನ ಮಾಡಿದ್ದಾನೆ (ಎಫೆಸ 3:20). ನಮ್ಮ ಸಂಕಷ್ಟಗಳು ಎಂದಿಗೂ ನಮಗೆ ತಾಳಿಕೊಳ್ಳಲಾಗದಷ್ಟು ಇರಲಾರವು ಎಂಬುದಾಗಿ ಆತನು ವಾಗ್ದಾನ ಮಾಡಿದ್ದಾನೆ (1 ಕೊರಿಂಥ

10:13). ಆತನು ಸಂಭವಿಸುವ ಪ್ರತಿಯೊಂದು ಸಂಗತಿಯ ಮೇಲೆ ಆಳ್ವಿಕೆ ಮಾಡುವನೆಂದು, ಹೀಗೆ ಅದು ನಮ್ಮ ಹಿತಕ್ಕಾಗಿ ಅನುಕೂಲವಾಗುವದು ಎಂಬ ವಾಗ್ದಾನವನ್ನು ಮಾಡಿದ್ದಾನೆ (ರೋಮಾ 8:28). ಸಮಸ್ಯೆಗಳಿಂದ ಮೇಲಕ್ಕೆತ್ತಲ್ಪಡುವದು ಮತ್ತು ಕೈಬಿಡಲ್ಪಡುವದರ ನಡುವಿನ ವ್ಯತ್ಯಾಸವು ಅನೇಕ ಸಾರಿ *ಮನೋಭಾವ*ಕ್ಕೆ ಸಂಬಂಧಪಟ್ಟ ಸಂಗತಿಯಾಗಿರುತ್ತದೆ. ಈಗಷ್ಟೆ ಪಟ್ಟಿ ಮಾಡಲಾದ ವಾಗ್ದಾನಗಳಲ್ಲಿ ನಂಬಿಕೆಯಿಟ್ಟಿರುವ ಕ್ರೈಸ್ತನು ಜೀವನದಲ್ಲಿ ಬರುವ ಬಿರುಗಾಳಿಗಳಲ್ಲಿ ಬದುಕುಳಿಯಬಲ್ಲನು; ಅವುಗಳಲ್ಲಿ ನಂಬಿಕೆಯನ್ನಿಡದ ಮನುಷ್ಯನು ಅದೇ ಬಿರುಗಾಳಿಗಳಿಂದ ನುಂಗಿ ಹಾಕಲ್ಪಡುವನು.

ಈ ಅಂಶವನ್ನು ದೃಷ್ಟಾಂತಪಡಿಸುವದಕ್ಕೆ, ಅಪೊಸ್ತಲನಾದ ಪೌಲನು ಒಟ್ಟಾರೆಯಾದ ಸಮಸ್ಯೆಗಳ ಕಡೆಗೆ ಮತ್ತು ನಿರ್ದಿಷ್ಟವಾಗಿ ಮರಣದ ಕಡೆಗೆ ಹೊಂದಿದ್ದ ಮನೋಭಾವವನ್ನು ಪರಿಗಣಿಸಿರಿ:

> ಆದದರಿಂದ ನಾವು ಧೈರ್ಯಗೆಡುವದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಆಂತರ್ಯವು ದಿನೇದಿನೇ ಹೊಸದಾಗುತ್ತಾ ಬರುತ್ತದೆ. ಹೇಗಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟು ಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ. ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದ್ದು ಸದಾಕಾಲವೂ ಇರುವದು. ಭೂಮಿಯ ಮೇಲಿರುವ ನಮ್ಮ ಮನೆಯು ಅಂದರೆ ನಮ್ಮ ದೇಹವೆಂಬ ಗುಡಾರವು ಕಿತ್ತು ಹಾಕಲ್ಪಟ್ಟರೂ ದೇವರಿಂದುಂಟಾದ ಒಂದು ಕಟ್ಟಡವು ಪರಲೋಕದಲ್ಲಿ ನಮಗುಂಟೆಂದು ಬಲ್ಲೆವು. ಅದು ಕೈಯಿಂದ ಕಟ್ಟಿದ ಮನೆಯಾಗಿರದೆ ನಿತ್ಯವಾಗಿರುವಂಥದಾಗಿದೆ. (2 ಕೊರಿಂಥ 4:16-5:1).

ತನಗೆ ಶೀಘ್ರದಲ್ಲೇ ಮರಣ ದಂಡನೆ ವಿಧಿಸಲ್ಪಡುವದೆಂಬುದನ್ನು ಅರಿತುಕೊಂಡಿದ್ದ ಅಪೊಸ್ತಲನು, ಹೀಗೆ ಹೇಳುತ್ತಾನೆ,

> ಯಾಕೆಂದರೆ ನಾನಂತೂ ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ; ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದದೆ. ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ; ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು (2 ತಿಮೊಥೆ 4:6-8).

ಹೋರಾಟಕ್ಕೊಳಪಟ್ಟ ಕ್ರೈಸ್ತರು ಪ್ರಕಟನೆ ಪುಸ್ತಕದಲ್ಲಿ ಸಿಕ್ಕುವ ತತ್ವಗಳನ್ನು ಮೈಗೂಡಿಸಿಕೊಳ್ಳುವದಾದರೆ ಮತ್ತು ಅವುಗಳನ್ನು ಅವರ ಆಲೋಚನೆ ಮತ್ತು ಜೀವಿತಗಳ ಭಾಗವಾಗಿ ಮಾಡಿಕೊಂಡರೆ, ನಾಶನ ಯಾವ ಗಾಳಿಯೂ ಅವರನ್ನು ಗೊಂದಲಕ್ಕೆ ಬೀಳಿಸಲಾಗದು. "ನಾವು ದೇವರ ಪಕ್ಷದಲ್ಲಿ ಉಳಿದುಕೊಳ್ಳುವದಾದರೆ, ನಾವು ಜಯಿಸುವೆವು!"

## ದೇವಜನರಿಗೆ ಮುದ್ರೆ ಹಾಕುವದು (7:1-8)

7:1-8ರ ಮೇಲಿನ ಪಾಠಕ್ಕಾಗಿ ಅನೇಕ ಶಿರ್ಷಿಕೆಗಳನ್ನು ಬಳಸಬಹುದಾಗಿದೆ. ವರ್ಣನಾತ್ಮಕ ಶಿರ್ಷಿಕೆಗಳಲ್ಲಿ "ಬಿರುಗಾಳಿಯ ಮಧ್ಯದಲ್ಲಿ ಪ್ರಶಾಂತತೆ," "ದೇವಜನರ

ವಿಷಯವೇನು?" ಮತ್ತು "ಸಂಕಟದ ಜೀವಿತಕ್ಕಾಗಿ ಸಿದ್ಧತೆ" ಎಂಬವುಗಳು ಸೇರಿರುತ್ತವೆ. ಇನ್ನಷ್ಟು ನಾಟಕೀಯವಾದ ಶಿರ್ಷಿಕೆಗಳಲ್ಲಿ ಇವುಗಳು ಸೇರಿರುತ್ತವೆ, "ಸಮಯವು ಮುಗಿಯಿತು!" (ಅಥವಾ "ಒಂದು ವಿರಾಮ ತೆಗೆದುಕೊಳ್ಳೋಣ!") ಮತ್ತು ಅಂಜಿಕೊಳ್ಳುವದಕ್ಕೆ ಭಯವಲ್ಲದೆ ಬೇರೆ ಇನ್ನೇನೂ ಇರುವದಿಲ್ಲ. ಈ ಕೊನೆಯ ಶಿರ್ಷಿಕೆಯು ಯುಎಸ್ ಅಧ್ಯಕ್ಷನಾದ Franklin Delano Rooseveltನ ಪ್ರಸಿದ್ಧ ಮಾತುಗಳ ಮೇಲೆ ಆಧಾರವಾಗಿರುತ್ತದೆ: "ನಾವು ಭಯ ಪಡಬೇಕಾದ ಏಕೈಕ ಸಂಗತಿಯೆಂದರೆ ಅದು ಭಯವೇ."[32]

### ದೇವರಿಗೆ ವಿಶೇಷವಾದವರು (7:3, 4)

ಅತ್ಯಂಥ ಶ್ರೇಷ್ಠ ಸತ್ಯಗಳಲ್ಲೊಂದೆಂದರೆ, ದೇವರು ತನ್ನ ಜನರ ಕಡೆಗೆ ಪಕ್ಷಪಾತಿಯಾಗಿರುತ್ತಾನೆ ಎಂಬುದೆ. ರಕ್ಷಣೆಯ ವಿಷಯದಲ್ಲಿ "ದೇವರು ಪಕ್ಷಪಾತಿಯಲ್ಲ" (ಅಪೊಸ್ತಲರ ಕೃತ್ಯಗಳು 10:34, 35; ನೋಡಿರಿ ಗಲಾತ್ಯ 3:28). ಹೇಗೂ, ಒಬ್ಬ ವ್ಯಕ್ತಿಯು ನಂಬಿಕೆಯ ಮತ್ತು ವಿಧೇಯತೆ ಮೂಲಕ ಕರ್ತನಿಗೆ ಪ್ರತಿಕ್ರಿಯೆಯನ್ನು ತೋರಿಸುವಾಗ, ಆತನು ಕರ್ತನಿಗೆ ಅಚ್ಚುಮೆಚ್ಚಿನವರೊಳಗೆ ಒಬ್ಬನಾಗುತ್ತಾನೆ. ದೇವರು "ನಮ್ಮ *ಕಡೆ*" ಇರುವವನು (ರೋಮಾ 8:31; ಒತ್ತಿ ಹೇಳಿದ್ದು ನನ್ನದು); ಆತನು ನಮ್ಮ ಪಕ್ಷದಲ್ಲಿದ್ದಾನೆ; ಆತನು ಪೂರ್ವನಿರ್ಧಾರದೊಂದಿಗೆ ನಮ್ಮ ಪರವಾಗಿ ಇದ್ದಾನೆ.

ಆದಿಕಾಂಡ 6:8ರಲ್ಲಿ, ನಾವು ಹೀಗೆ ಓದುತ್ತೇವೆ, "ಆದರೆ ನೋಹನಿಗೆ ಯೆಹೋವನ *ದಯವು* ದೊರಕಿತು" (ಒತ್ತಿ ಹೇಳಿದ್ದು ನನ್ನದು). ಮೋಶೆ, ಸಮುವೇಲ, ದಾವೀದ, ಮರಿಯಳು, ಮತ್ತು ಯೇಸುವಿನ ವಿಷಯವಾಗಿ ಸಹ ಅದನ್ನೇ ಹೇಳಲಾಗಿರುತ್ತದೆ (ವಿಮೋಚನಕಾಂಡ 33:12; 1 ಸಮುವೇಲ 2:26; ಅಪೊಸ್ತಲರ ಕೃತ್ಯಗಳು 7:46; ಲೂಕ 1:30; 2:52). ಜ್ಞಾನಿಯು ಹೀಗೆ ಹೇಳಿದನು, "ಯೆಹೋವನು ಒಳ್ಳೆಯವನಿಗೆ ದಯೆಮಾಡುವನು" (ಜ್ಞಾನೋಕ್ತಿ 12:2), ಮತ್ತು ಕೀರ್ತನೆಗಾರನು ಹೀಗೆ ಬರೆದನು, "ಯೆಹೋವನು ಆನಂದಿಸುವದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ" (ಕೀರ್ತನೆ 147:11). ಒಂದು ವಿಶೇಷವಾಗಿ ಸೂಕ್ತವಾದ ವಾಕ್ಯಭಾಗವು 1 ಪೇತ್ರ 2:20ರಲ್ಲಿ ಸಿಕ್ಕುತ್ತದೆ: "ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ" (ನೋಡಿರಿ ಕೀರ್ತನೆ 5:12; 30:5; 44:3; 106:4; ಜ್ಞಾನೋಕ್ತಿ 3:4; 8:35; 18:22; ಗಲಾತ್ಯ 1:10).

ನೀವು ಒಬ್ಬ ಕ್ರೈಸ್ತನಾಗುವ ವೇಳೆ, ದೇವರಿಗೆ ನೀವು *ವಿಶೇಷ* ಆಗುವಿರಿ. "ವಿಶೇಷವಾದವರು" ಎಂಬ ಪದವು KJV ಮತ್ತು NASBಗಳಲ್ಲಿ ಮಾತ್ರವೇ ಕಂಡು ಬರುತ್ತದೆ (ವಿಶೇಷವಾಗಿ KJVಯಲ್ಲಿ ಧರ್ಮೋಪದೇಶಕಾಂಡ 7:6ನ್ನು ನೋಡಿರಿ), ಆದರೆ "ಪರಿಶುದ್ಧಗೊಳಿಸಲ್ಪಟ್ಟವರು" ಮತ್ತು "ಪವಿತ್ರರು" ಎಂಬ ಪದಗಳಲ್ಲಿ ದೇವರಿಗೆ "ವಿಶೇಷವಾದವರು" ಎಂಬ ಯೋಚನೆಯು ಸೇರಿರುತ್ತದೆ – ಮತ್ತು ಆ ಪದಗಳು ಅನೇಕ ಸಾರಿ ದೇವರ ಜನರಿಗೆ ಅನ್ವಯಿಸಲ್ಪಡುತ್ತವೆ (ನೋಡಿರಿ 1 ಕೊರಿಂಥ 6:11; 2 ತಿಮೊಥೆ 2:21; ಇಬ್ರಿಯ 2:11; 10:10; 1 ಪೇತ್ರ 1:16; 2:5, 9). ಸಮಸ್ಯೆಗಳು ನಿಮ್ಮ ಜೀವಿತದೊಳಗೆ ದಾಳಿ ಮಾಡುವದರಿಂದ ನಿಮ್ಮನ್ನು ಕಡಿಮೆ ವಿಶೇಷವಾದರನ್ನಾಗಿ ಮಾಡುವದಿಲ್ಲ. ವಾಸ್ತವಿಕದಲ್ಲಿ, ನೀವು ಆ ಸಮಸ್ಯೆಗಳನ್ನು ನಂಬಿಕೆಯ ಮೂಲಕ ಎದುರುಗೊಳ್ಳುವದಾಧರೆ, ನೀವು ಕರ್ತನಿಗೆ ಇನ್ನಷ್ಟು ವಿಶೇಷವಾದವರಾಗುವಿರಿ – ಒಂದು ವೇಳೆ ಅಂಥದ್ದು ಸಾಧ್ಯವಿರುವಾದರೆ.

ನೀವು ಅರಸನ ಮಗನಾಗಿರುವದಾದರೆ, ನೀವು ಎಂದಿಗೂ ಅಸಡ್ಡೆ ಮಾಡಲ್ಪಡುವದಿಲ್ಲ; ನೀವು "ಮುದ್ರೆ ಒತ್ತಲ್ಪಟ್ಟವರು." ಎರಡನೆಯ ತಿಮೊಥೆ 2:19 ಈ ಅಂಶವನ್ನು ಸಾರಾಂಶಗೊಳಿಸುತ್ತದೆ: "ಆದರೂ ದೇವರ ಅಸ್ತಿವಾರವು ನಿಲ್ಲುತ್ತದೆ. ಅದರ ಮೇಲೆ –

ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆಂತಲೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟುಬಿಡಬೇಕೆಂತಲೂ ಲಿಪಿಯುಂಟು." ನೀವು ದೇವರ ಮಗುವಾಗಿರುವದಾದರೆ, ಆತನು ನಿಮ್ಮನ್ನು ಬಲ್ಲವನಾಗಿದ್ದಾನೆ (ನೋಡಿರಿ ನಹೂಮನು 1:7; ಯೋಹಾನ 10:14): ಆತನಿಗೆ ನಿಮ್ಮ ಅಂತರಂಗ ಮತ್ತು ಬಹಿರಂಗಗಳು ತಿಳಿದಿದೆ. ಆತನಿಗೆ ನಿಮ್ಮ ಸಾಮರ್ಥ್ಯಗಳು ಮತ್ತು ದುರ್ಬಲತೆಗಳು ಗೊತ್ತಿವೆ. ನೀವು ಕೇಳಿಕೊಳ್ಳುವದಕ್ಕೆ ಮುನ್ನವೇ ನಿಮ್ಮ ಅಗತ್ಯತೆಗಳೇನೆಂದು ಆತನು ಬಲ್ಲವನಾಗಿದ್ದಾನೆ (ಮತ್ತಾಯ 6:8). ಆತನು ನಿಮ್ಮನ್ನು ಎಷ್ಟೊಂದು ನಿಟಕವಾಗಿ ಅರಿತವನಾಗಿದ್ದಾನೆಂದರೆ ನಿಮ್ಮ ತಲೆಯ ಮೇಲಿರುವಂಥ ಕೂದಲುಗಳ ಸಂಖ್ಯೆಯೂ ಆತನಿಗೆ ತಿಳಿದದೆ (ಮತ್ತಾಯ 10:30). ನೀವು ಕರ್ತನಿಗೆ ವಿಶೇಷವಾದವರು!

## ಸಿಂಹಾಸನದ ಸುತ್ತಲಿದ್ದ ಜನಸಮೂಹ (7:9-17)

ಈ ವಿಭಾಗದ ಮೇಲಿನ ಒಂದು ಪಾಠಕ್ಕೆ ಈ ಶಿರ್ಷಿಕೆಗಳನ್ನು ಕೊಡಬಹುದಾಗಿದೆ, "ಬಿರುಗಾಳಿಯನ್ನು ಮೀರಿ ನಿಲ್ಲುವದು," "ಆಚೆ ಬದಿಯಿಂದ ಕಾಣುವ ದೃಶ್ಯ," ಅಥವಾ "ಚಿತ್ರದ ಇನ್ನೊಂದು ಬದಿ." ಅದಕ್ಕೆ ಈ ಶಿರೋನಾಮೆಯನ್ನು ಸಹ ಇಡಬಹುದಾಗಿದೆ, "ಕಥೆಯ ಉಳಿದ ಭಾಗ": ಮೊದಲ ದೃಶ್ಯವು (7:1-8) ಒಂದು ನೋಟವನ್ನು ಒದಗಿಸುತ್ತದೆ (ಸಭೆಯು ತೊಂದರೆಯನ್ನು ಎದುರಿಸುವದಕ್ಕೆ ಸಿದ್ಧಗೊಳ್ಳುವುದು), ಆದರೆ ಎರಡನೆಯ ದೃಶ್ಯವು (7:9-17) ಅಂತಿಮವಾದ ನೋಟವನ್ನು ಒದಗಿಸುತ್ತದೆ (ವಿಜಯಿಶಾಲಿ ಸಭೆ). ಇನ್ನೊಂದು ಶಿರ್ಷಿಕೆಯು "ಪರಲೋಕದಲ್ಲಿ ಕಣ್ಣೀರಿಲ್ಲ" ಎಂದು ಇರಬಹುದಾಗಿದೆ.

ಒಂದು ಬೇರೆ ಅರ್ಥೈಸುವ ದಾರಿಯನ್ನು ಅನುಸರಿಸಬೇಕೆಂದರೆ, ನೀವು "ಪರಲೋಕವನ್ನು ಹೇಗೆ ಆನಂದಿಸುವದು" ಎಂಬ ಪ್ರಮುಖ ಚರ್ಚೆಯಾಂಶವನ್ನು ಬಳಸಬಹುದಾಗಿದೆ: ಪರಲೋಕವು ಸಿದ್ಧತೆ ಮಾಡಿಕೊಂಡಿರುವ ಜನರಿಗೋಸ್ಕರವಾಗಿ ಸಿದ್ಧಗೊಳಿಸಲ್ಪಟ್ಟಿರುವ ಸ್ಥಳವಾಗಿದೆ (ಮತ್ತಾಯ 25:34; ಯೋಹಾನ 14:2; ಪ್ರಕಟನೆ 21:27), ಮತ್ತು ಪ್ರಕಟನೆ 7:9-17 ವಚನಗಳು ನಮಗೆ ಯಾವದಕ್ಕಾಗಿ ಸಿದ್ಧತೆ ಮಾಡಿಕೊಳ್ಳಬೇಕೆಂಬುದನ್ನು ತಿಳಿಸುತ್ತದೆ: (1) ದೇವರಿಗೆ ವಿಧೇಯವಾಗುವದನ್ನು ಆನಂದಿಸುವದಕ್ಕೆ ಕಲಿಯಿರಿ (ವ. 9) - ದೇವರ ಸಿಂಹಾಸನದ ಮುಂದೆ ನಿಲ್ಲುವದು ಆತನ ಚಿತ್ತವನ್ನು ಮಾಡುವದಕ್ಕೆ ಸಿದ್ಧಮನಸ್ಸುಳ್ಳವರಾಗಿರುವದನ್ನು ಸೂಚಿಸುತ್ತದೆ; (2) ದೇವರ ಆರಾಧನೆ ಮಾಡುವದನ್ನು ಆನಂದಿಸುವದಕ್ಕೆ ಕಲಿಯಿರಿ (ವಚನಗಳು 10-12); (3) ಒಂದು ನಿರ್ಮಲವಾದ ಜೀವಿತವನ್ನು ನಡಿಸುವದಕ್ಕೆ ಕಲಿಯಿರಿ (ವಚನಗಳು 13, 14) - ಬಿಳೀ ನಿಲುವಂಗಿಗಳು ಶುದ್ಧತೆಗೆ ಸಂಕೇತವಾಗಿವೆ; (4) ಕರ್ತನ ಸೇವೆ ಮಾಡುವದನ್ನು ಆನಂದಿಸುವದಕ್ಕೆ ಕಲಿಯಿರಿ (ವ. 15); (5) ದೇವಜನರ ಅನ್ಯೋನ್ಯತೆಯಲ್ಲಿ ಆನಂದಿಸುವದಕ್ಕೆ ಕಲಿಯಿರಿ (ಇಡೀ ವಾಕ್ಯಭಾಗ). ಈ ಪಾಠದಲ್ಲಿ ಬಳಸಬಹುದಾದ ಎರಡು ಉಲ್ಲೇಖಗಳು ಇಲ್ಲಿವೆ: "ಪರಲೋಕವು ಸೇವೆಗಾಗಿ ಇರುವ ಒಂದು ಸ್ಥಳವಾಗುವದು, ಅಲ್ಲಿ ಪ್ರತಿಯೊಬ್ಬನಿಗೂ ತನ್ನ ಸಾಮರ್ಥ್ಯವನ್ನು ಪೂರ್ಣಪ್ರಮಾಣದಲ್ಲಿ ಅಭಿವೃದ್ಧಿಪಡಿಸಿಕೊಳ್ಳುವದಕ್ಕೆ ಸಮೃದ್ಧವಾದ ಸದವಕಾಶವು ಸಿಕ್ಕುವದು."[33] "ಪರಲೋಕದಲ್ಲಿ ಇರುವವರೊಳಗೆ ಹಾಡದೆ ಇರುವ ಯಾವನೊಬ್ಬನನ್ನೂ ಕಲ್ಪಿಸಿಕೊಳ್ಳು ಯೋಹಾನನಿಗೆ ಸಾಧ್ಯವಾಗಲಿಲ್ಲ."[34]

## ನೀವು ಪರಲೋಕಕ್ಕೆ ಹೋಗಲು ಬಯಸುವಿರೋ? (7:9-17)

ಪೌಲನು ಒಂದು ಸಾರಿ ತನಗೆ "ಇಲ್ಲಿಂದ ಹೋಗಿ ಬಿಟ್ಟು ಕ್ರಿಸ್ತನ

ಜೊತೆಯಲ್ಲಿರಬೇಕೆಂಬದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ" ಎಂದು ಬರೆದನು (ಫಿಲಿಪ್ಪಿ 1:23). ಎಷ್ಟೊಂದು ಉತ್ತಮ? ಇಷ್ಟೊಂದು: ನಾವು ದೇವರ ಸಂಗಡ ಒಂದು ನಿಕಟವಾದ ಮತ್ತು ವೈಯಕ್ತಿವಾದ ಸಂಬಂಧವನ್ನು ಹೊಂದಿರುವೆವು. ಈ ಭೂಮಿಯ ಕೀಳುತನ ಮತ್ತು ಹೊಲಸುತನಗಳು ಇಲ್ಲದೆ ಹೋಗುವವು; ನಾವು ಬಿಳಿ ನಿಲುವಂಗಿಗಳನ್ನು ಧರಿಸಿಕೊಂಡಿರುವೆವು. ನಾವು ಕರ್ತನನ್ನು ಸ್ತುತಿಸುತ್ತಾ ಆತನ ಸೇವೆಯನ್ನು ಮಾಡುವೆವು. ಎಲ್ಲಾ ಅಗತ್ಯತೆಗಳು ಸಂಧಿಸಲ್ಪಡುವವು. ಯೇಸುವು ನಮ್ಮ ನಿರಂತರವಾದ ಸಹಪಾಠಿಯಾಗಿರುವನು. ದೇವರು ಪ್ರತಿಯೊಂದು ಕಣ್ಣೀರನ್ನು ಒರೆಸಿ ಬಿಡುವನು.

ಅದು ನಿಮ್ಮನ್ನು ಪರಲೋಕಕ್ಕೆ ಹೋಗಬೇಕೆಂದು ಬಯಸುವಂತೆ ಮಾಡುವದಿಲ್ಲವೋ? ಯಾರು "ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿಕೊಂಡಿದ್ದಾರೋ" (7:14) ಅವರು ಮಾತ್ರವೇ ಪರಲೋಕಕ್ಕೆ ಹೋಗುವವರಾಗಿದ್ದಾರೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಯೇಸು ಒಮ್ಮೆ ಬಿರುಗಾಳಿಯಲ್ಲಿ ಹೇಗೆ ಬದುಕುಳಿಯಬೇಕೆಂಬ ಕುರಿತು ಒಂದು ಕೋರ್ಸ್‌ನ್ನು ಕಲಿಸಿದನು: ಮಳೆಯು ಸುರಿಯುವಾಗ ಪ್ರವಾಹವು ಬರುವದು ಮತ್ತು ಗಾಳಿಯು ಬೀಸುವದು, ಆತನ ಮಾತುಗಳನ್ನು ಕೇಳಿ *ಅವುಗಳಂತೆ ನಡೆಯುವವನು* ಮಾತ್ರವೇ ಬೀಳದಂತೆ ನಿಲ್ಲುವನು (ಮತ್ತಾಯ 7:24-27). ನಿಮ್ಮ ಪಾಪಗಳು ರಕ್ತದಲ್ಲಿ ತೊಳೆಯಲ್ಪಟ್ಟಿಲ್ಲವಾದರೆ, ನೀವು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿರುತ್ತದೆ (ಅಪೊಸ್ತಲರ ಕೃತ್ಯಗಳು 22:16), ಮತ್ತು ಬಳಿಕ ನೀವು ಕರ್ತನ ಸಂಗಡ ನಡೆಯುವವರಾಗಿರಬೇಕು, ಹೀಗೆ ರಕ್ತವು ನಿಮ್ಮನ್ನು ಎಡೆಬಿಡದೆ ಶುದ್ಧ ಮಾಡುತ್ತಿರುವದು (1 ಯೋಹಾನ 1:7).

## ಮಹಾ ಸಮೂಹ (7:9)

9ನೇ ವಚನದಲ್ಲಿ ಸಿಂಹಾಸನದ ಮುಂದೆ ಕೂಡಿ ಬಂದಿದ್ದ ಜನರ ಗುಂಪು ಒಂದು "*ಮಹಾ ಸೈನ್ಯ*" ಆಗಿತ್ತು (AB; ಒತ್ತಿ ಹೇಳಿದ್ದು ನನ್ನದು). "ಜೀವಕ್ಕೆ ನಡಿಸುವ" ಇಕ್ಕಟ್ಟಾದ ಮಾರ್ಗವನ್ನು ಕಂಡುಕೊಳ್ಳುವವರು "ಸ್ವಲ್ಪ" ಜನರು ಎಂದು ಯೇಸು ಒತ್ತಿ ಹೇಳಿದನು (ಮತ್ತಾಯ 7:14) - ಆದರೆ "ಸ್ವಲ್ಪ" ಒಂದು ಸಂಬಂಧಿಕ ಪದವಾಗಿರುತ್ತದೆ. ಕರ್ತನು ಹೊರಗಿಟ್ಟವರನ್ನು ರಕ್ಷಿಸಲ್ಪಟ್ಟವರಲ್ಲಿ ಸೇರ್ಪಡೆಗೊಳಿಸುವದು ತಪ್ಪು, ಆದರೆ ಕರ್ತನು ಸೇರ್ಪಡೆಗೊಳಿಸಿರುವ ಯಾರನ್ನೇ ಆಗಲಿ ಹೊರಗಿಡುವದು ಸಹ ತಪ್ಪು. ಒಂದು ಪ್ರಾಚೀನ ವಿಡಂಬನಾತ್ಮಕ ಬರಹವೊಂದು ಈ ಅಂಶವನ್ನು ತನ್ನ ಮುಕ್ತಾಯದ ಮಾತುಗಳಲ್ಲಿ ತಿಳಿಸುತ್ತದೆ: "ನಾನು ಮತ್ತು ನೀನು ಮಾತ್ರವೇ ಪರಲೋಕಕ್ಕೆ ಹೋಗುವೆವು . . . ಮತ್ತು ಆದರೆ ಕೆಲವು ಸಾರಿ ನನಗೆ ನಿನ್ನ ವಿಷಯದಲ್ಲಿ ಪ್ರಶ್ನೆಯು ಮೂಡುತ್ತದೆ."

ನಾವು "ಎಲೀಯ ಸಂಕೀರ್ಣ"ತೆಯಿಂದ ದೂರವಿರತಕ್ಕದ್ದು. ಪ್ರವಾದಿಯು ಹತಾಶನಾಗಿ ಉದ್ಗಾರ ತೆಗೆಯುತ್ತಾನೆ, "ನಾನೊಬ್ಬನೇ ಉಳಿದು" ಇದ್ದೇನೆ (1 ಅರಸು 19:10, 14). ನಮಗೆ ಆ ವಿಧವಾಗಿ ಅನ್ನಿಸುವ ವೇಳೆ, "ಬಾಳನ ವಿಗ್ರಹಕ್ಕೆ ಅಡ್ಡಬೀಳದೆಯೂ . . . ಇರುವ ಏಳು ಸಾವಿರ ಮಂದಿ ಇಸ್ರಾಯೇಲ್ಯರು" ಇದ್ದರು ಎಂಬುದನ್ನು ಜ್ಞಾಪಿಸಿಕೊಳ್ಳುವ ಅಗತ್ಯತೆಯು ನಮಗಿರುತ್ತದೆ (1 ಅರಸು 19:18). ಅಥವಾ ಪ್ರಕಟನೆ 7ರಲ್ಲಿನ ಪರಿಭಾಷೆಯನ್ನು ಬಳಸುವದಾದರೆ, ಕರ್ತನಿಗೆ ಈಗಲೂ ನಂಬಿಗಸ್ತರಾಗಿ ಉಳಿದಿರುವ "ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹ" ಇರುತ್ತದೆ (7:9).

## ಅಡಿಟಿಪ್ಪಣಿಗಳು

[1]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 70. [2]W. B. West, Jr., *Revelation Through First-Century Glasses*, ed. Bob Prichard (Nashville: Gospel Advocate Co., 1997), 69. [3]H. L. Ellison, *1 Peter-Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 57. [4]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 590. [5]G. R. Beasley-Murray, *The Book of Revelation,* The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 142. [6]Homer Hailey, *Revelation* (Grand Rapids, Mich.: Baker Book House, 1979), 202. [7]See David Roper, "What Does the Holy Spirit Do?" *Truth for Today* 16 (September 1995), 48–49. [8]M. Robert Mulholland, Jr., *Revelation: Holy Living in an Unholy World*, Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 181 (emphasis added). [9]See Ed Sanders, "Revelation and the Cults," *Vision of Victory: The Book of Revelation* (Searcy, Ark.: Harding University, 1992): 250. [10]Burton Coffman, *Commentary on Revelation* (Austin, Tex.: Firm Foundation Publishing House, 1979), 154.

[11]ಈ ಅಂಶದ ಕುರಿತಾದ ಅತ್ಯಂತ ಸಮಗ್ರವಾದ ಚರ್ಚೆಗಳಲ್ಲೊಂದು Ray Summers, *Worthy Is the Lamb* (Nashville: Broadman Press, 1951), 146–51ರಲ್ಲಿ ಸಿಕ್ಕುತ್ತದೆ. [12]Coffman, 158. [13]Albertus Pieters, *Studies in the Revelation of St. John* (Grand Rapids, Mich.: Wm. B. Eerdmans Publishing Co., 1954), 125. [14]Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 171. [15]Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 37. [16]See Hailey, 213. [17]John Wick Bowman, *The First Christian Drama: The Book of Revelation* (Philadelphia: Westminster Press, 1955), 51. [18]Earl F. Palmer, *1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 182. [19]Mounce, 172. [20]Hailey, 207.

[21]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 38. [22]D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 139. [23]Edward A. McDowell, *The Meaning and Message of the Book of Revelation* (Nashville: Broadman Press, 1951), 99. [24]Quoted by Myer Pearlman in *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 77. [25]Mounce, 176. [26]Palmer, 184. [27]Corrie ten Boom, *In My Father's House* (Old Tappan, N.J.: Fleming H. Revell Co., 1976), 192. [28]Pearlman, 78. [29]Baldinger, 38–39. [30]William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 36.

[31]Wiersbe, 586–91. [32]John Bartlett, *Bartlett's Familiar Quotations*, ed. Justin Kaplan (Boston: Little, Brown, and Company, 1992), 648ರಲ್ಲಿ ಉಲ್ಲೇಖಿಸಲಾಗಿದೆ. [33]Pearlman, 77. [34]Baldinger, 38.